ಶ್ರೀ ಡಿ.ಬಿ. ಚಂದ್ರೇಗೌಡ : ಇವತ್ತು ಬೆಳಿಗ್ಗೆ ತಾನೆ ಪ್ರಶ್ನೋತ್ತರ ಕಾಲದಲ್ಲಿ ಬಂದಂಥ ವಿಚಾರವಿದು. ವಿದ್ಯುಚ್ಛಕ್ತಿ ಪೂರೈಕೆ ಅಸಮರ್ಪಕವಾಗಿದೆ........

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಅಲ್ಲಿ ಜನತೆಗೆ ತೀವ್ರವಾದ ಅನ್ಯಾಯ ಆಗಿದೆ. ಆದುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಈಶ್ವರಪ್ಪನವರೇ ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ಈಗ ವಿರೋಧ ಪಕ್ಷದ ನಾಯಕರನ್ನು ಕರೆದಿದ್ದೇನೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ದಿನಾಂಕ 2-9-1991 ರಂದು ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ರೈತರ ಮೇಲೆ ಹಲ್ಲೆ ನಡೆದಿರುವ ಬಗ್ಗೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, 2ನೇ ತಾರೀಖು ಶ್ರೀನಿವಾಸಪುರದಲ್ಲಿ ರೈತರು ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ ಬಗ್ಗೆ ಮತ್ತು ಅಸಮರ್ಪಕ ವಿದ್ಯುತ್ ಪೂರೈಕೆ ಬಗ್ಗೆ ಒಂದು ಪ್ರದರ್ಶನವನ್ನು ಅಥವಾ ಪ್ರತಿಭಟನೆಯನ್ನು ಏರ್ಪಡಿಸಿದ್ದರು. ಆ ದಿವಸ ಸುಮಾರು 4-5 ಸಾವಿರ ಜನ ರೈತರು ಸೇರಿ, ಪ್ರದರ್ಶನ ಮಾಡಿ, ತಮ್ಮ ಪ್ರತಿಭಟನೆಯನ್ನು ವ್ಯಕ್ತ ಮಾಡುವುದಕ್ಕಾಗಿ, ತಹಶೀಲ್ದಾರ್‌ರವರ ಕಛೇರಿಗೆ ಹೋದರೆ, ಅವರು ಮೀಟಿಂಗ್‌ನಲ್ಲಿ ಕುಳಿತಿದ್ದರು. ಆದರೆ ಈಗ ಪತ್ರಿಕೆಗಳಲ್ಲಿ ರೈತರು, ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಿದರು, ಎಂದು ವರದಿ ಬಂದಿದೆ. ನಮಗೆ ಬಂದಿರತಕ್ಕ ಸುದ್ದಿ ಪ್ರಕಾರ ಇವತ್ತು ಎಲ್ಲಾ ನೌಕರರನ್ನೂ ರೈತರು ಹಿಡಿದುಕೊಂಡು ಹೊಡೆದರು, ಮಾಡಿದರು ಎಂದು ಹೇಳಿ, ಕೇಸುಗಳನ್ನು ದಾಖಲೆ ಮಾಡುವಂಥ ಸ್ಥಿತಿಗೆ ಹೋಗಿದ್ದಾರೆ. ಈಗಾಗಲೇ ಸುಮಾರು 6 ಜನ ರೈತರನ್ನು ಮೂಳೆ ಮುರಿಯುವ ಹಾಗೆ ಹೊಡೆದಿದ್ದಾರೆ. ಬಹುತೇಕ ಅಲ್ಲಿರತಕ್ಕ ಜನತಾದಳದ ಅಧ್ಯಕ್ಷರು, ವಿಶೇಷವಾಗಿ ಮಂಡಲದ ಪ್ರಧಾನರು ಮತ್ತು ಹಾಲಿನ ಒಕ್ಕೂಟದ ಅಧ್ಯಕ್ಷರು, ಹೀಗೆ ಬಹಳ ಪ್ರಮುಖ ರಾಜಕೀಯ ಮುಖಂಡರ ಮೇಲೆ ಇಷ್ಟು ಅಮಾನುಷವಾದ ಹಲ್ಲೆ ನಡೆದಿದೆ. ಸರ್ಕಾರ ಇದುವರೆಗೂ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ? ರೈತರು ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡಿದ್ದಾರೆ. ಸರ್ಕಾರ ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ಕನಿಷ್ಠ ಪಕ್ಷ ಒಂದು ಹೇಳಿಕೆಯನ್ನು ಸದನಕ್ಕೆ ಕೊಡದೆ ಇದ್ದರೆ, ಚರ್ಚೆಗೆ ತಾವು ಅವಕಾಶ ಕೊಡದಿದ್ದರೆ, ಇದು ಜನತಂತ್ರದ ವ್ಯವಸ್ಥೆಯ ಸರ್ಕಾರ ಅಲ್ಲ, ಪೋಲೀಸು ರಾಜ್ಯವಾಗಿದೆ. ಈ ಸರ್ಕಾರ ಪ್ರತಿಪಕ್ಷಗಳನ್ನು ಹತ್ತಿಕ್ಕುವುದಕ್ಕೆ ಈ ಪೋಲೀಸರನ್ನು ಮತ್ತು ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದೆ ಎನ್ನತಕ್ಕಂಥ ಅತ್ಯಂತ ಜವಾಬ್ದಾರಿಯುತವಾದ ಅಪಾದನೆಯನ್ನು ನಾನು ಮಾಡುತ್ತಿದ್ದೇನೆ. ಮಾನ್ಯ ಗೃಹಸಚಿವರೂ ಇಲ್ಲಯೇ ಇರುವುದರಿಂದ, ಈ ಬಗ್ಗೆ ಏನಾದರೂ ಒಂದು ಹೇಳಿಕೆಯನ್ನು ಕೊಡುತ್ತಾರೆಯೇ ಎಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿ, ತಮ್ಮ ಕೊಠಡಿಯಲ್ಲಿ ಬಂದು ಮಾತನಾಡಿದ್ದೇನೆ. ಪ್ರಶ್ನೆ ಏನೆಂದರೆ, ನಿನ್ನೆ ದಿವಸ ಕೋಲಾರ ಜಿಲ್ಲೆ ಶ್ರೀನಿವಾಸಪುರದಲ್ಲಿ ...

ಶ್ರೀ ಎಂ. ನಾರಾಯಣ ಸ್ವಾಮಿ : ನಾನು ಆ ಪ್ರದೇಶಕ್ಕೆ ಸಂಬಂಧಪಟ್ಟವನು, ವಿಶೇಷವಾಗಿ ಕೆಲವು ಮಾಹಿತಿಗಳು ಇವೆ, ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು : ನೀವು ಬರೆದು ಕಳುಹಿಸಿ, ಆಮೇಲೆ ಕರೆಯುತ್ತೇನೆ. ಈಗ ಯಾರು ಬರೆದು ಕಳುಹಿಸಿದ್ದಾರೆಯೋ ಅವರಿಗೆ ಅವಕಾಶ ಕೊಡುತ್ತಿದ್ದೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ, ನಾನು, ನಮ್ಮ ಸದಸ್ಯರಾದ ಈಶ್ವರಪ್ಪನವರು ಮತ್ತು ರುಕ್ಮಯ್ಯ ಪೂಜಾರಿಯವರು ಸಹಿಮಾಡಿ ಕಳುಹಿಸಿಕೊಟ್ಟಿರುವಂಥ ವಿಷಯ ಏನೆಂದರೆ, ಕೋಲಾರ ಜಿಲ್ಲೆ, ಶ್ರೀನಿವಾಸುಪುರದಲ್ಲಿ, ರಾಸಾಯನಿಕ ಗೊಬ್ಬರದ ಬೆಲೆ ನೀತಿಯನ್ನು ವಿರೋಧ ಮಾಡಿ, ಮತ್ತು ವಿದ್ಯುತ್ ಸಂಪರ್ಕ ಸರಿಯಿಲ್ಲ, ಅಸಮರ್ಥದಿಂದ ಕೂಡಿದೆ ಎಂದು ಪ್ರತಿಭಟನೆ ಮಾಡಿ ರೈತರು ಹೋರಾಟ ಮಾಡಿದರು. ಅವರ ಮೇಲೆ ಪೋಲೀಸ್‌ನವರು ದೌರ್ಜನ್ಯವನ್ನು ಮಾಡಿದರು. ಹೊಡೆತ ತಿಂದಂತಹ ರೈತರು ರಕ್ತವಾಗಿರತಕ್ಕ ಬಟ್ಟೆಗಳನ್ನು ತಂದು ವಿಧಾನ ಪರಿಷತ್ತಿನಲ್ಲಿ ಪ್ರದರ್ಶನ ಮಾಡಿದರು. ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟು, ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ಇದು ಆದಮೇಲೆ ಆ ದಿನ ಸಾಯಂಕಾಲದೊಳಗೆ ಅಲ್ಲಿ ಇರುವಂತಹ ಎಲ್ಲಾ ಪಕ್ಷಗಳ ಮುಖಂಡರು, ಈ ರೀತಿ ರೈತರ ಮೇಲೆ ದೌರ್ಜನ್ಯ ಮಾಡತಕ್ಕದ್ದು ಸರಿಯಲ್ಲವೆಂದು ಪ್ರತಿಭಟನೆ ಮಾಡುವುದಕ್ಕೆ ಪೋಲೀಸ್ ಠಾಣೆಗೆ ಹೋದರೆ, ಆ ಜನರ ಮೇಲೆ, ಮುಖಂಡರ ಮೇಲೆ ಬೂಟ್ಸ್ ಕಾಲಿನ ಹೊಡೆತ ಮಾಡಿದ್ದಾರೆ. ಕೋಲಾರ ಜಿಲ್ಲೆಯ ಹಾಲು ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷರಾದ ಕೆ.ಆರ್. ವೆಂಕಟಶಿವ ರೆಡ್ಡಿ, ಶ್ರೀನಿವಾಸಪುರ, ತಾಲ್ಲೂಕು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಮಾಜಿ ಅಧ್ಯಕ್ಷರಾದ ಶ್ರೀನಿವಾಸರೆಡ್ಡಿ ಗೋಣೂರು ಮಂಡಲ ಪಂಚಾಯಿತಿಯ ಉಪಪ್ರಧಾನರಾದ ಶಿವರಾಮಶರ್ಮ, ತಾಲ್ಲೂಕು ಜನತಾದಳ ಅಧ್ಯಕ್ಷರಾದ ವೆಂಕಟಶಿವರೆಡ್ಡಿ. ಒಬ್ಬ ವಕೀಲ ಶಿವಣ್ಣ - ಇವರುಗಳ ಮೇಲೆ ಪೋಲೀಸ್‌ನವರು ದೌರ್ಜನ್ಯ ಮಾಡಿದ್ದಾರೆ. ನಾನು ಪ್ರಮುಖವಾಗಿ ಪ್ರಸ್ತಾಪ ಮಾಡುವುದೇನೆಂದರೆ ಈಗ ಸದನ ನಡೆಯುತ್ತಿದೆ, ನಿನ್ನೆ ಈ ವಿಚಾರ ವಿಧಾನಪರಿಷತ್ತಿನಲ್ಲಿ ಪ್ರಸ್ತಾಪವಾಗಿದೆ. ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ತಮ್ಮ ಹೇಳಿಕೆಯನ್ನು ಕೊಡುವವರಿದ್ದಾರೆ. ಇದು ಆದಮೇಲೆ ಚುನಾಯಿತ ಪ್ರತಿನಿಧಿಗಳಿಂದ ವಿಚಾರವನ್ನು ವಿಧಾನಪರಿಷತ್‌ನಲ್ಲಿ ಪ್ರಸ್ತಾಪ ಮಾಡಿಸುವ ಮಟ್ಟಕ್ಕೆ ಬಂದಿಟ್ಟೀರಾ, ನಿಮ್ಮ ಪಕ್ಷಗಳ ಮುಖಂಡರಿಗೆ ತಿಳಿಸುತ್ತೀರಾ? ನಿಮ್ಮ ಶಾಸಕರುಗಳಿಗೆ ತಿಳಿಸುತ್ತೀರಾ? ನೀವು ಏನು ಮಾಡುತ್ತೀರೋ ನೋಡುತ್ತೇವೆ ಎಂದು ಪೋಲೀಸ್‌ನವರು ದೌರ್ಜನ್ಯವನ್ನು ಮಾಡುತ್ತಾರೆಂದರೆ, ಸಾಮಾನ್ಯ ವ್ಯಕ್ತಿಗೆ ಅಥವಾ ಶ್ರೀಸಾಮಾನ್ಯನಿಗೆ ಈ ಗೃಹ ಇಲಾಖೆಯಿಂದ ರಕ್ಷಣೆ ಸಿಗುತ್ತದೆಯೆ? ಸರ್ಕಾರಕ್ಕೆ ಅಪಮಾನವಾಗುವುದಿಲ್ಲವೆ? ಇದು ಮೂಲವಾಗಿರತಕ್ಕ ಪ್ರಶ್ನೆ ನಾನು ಒತ್ತಾಯ ಮಾಡುತ್ತಿರುವುದು ಏನೆಂದರೆ, ಈ ರೀತಿಯ ದೌರ್ಜನ್ಯಗಳು ಅನೇಕ ಕಡೆ ನಡೆಯುತ್ತಿವೆ. ಅದರ ಬಗ್ಗೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ನಾನು ಕೇಳುವುದೇನೆಂದರೆ ಮಾನ್ಯ ಸಚಿವರನ್ನು ಈ ದೌರ್ಜನ್ಯ ನಡೆದಿರುವುದು ಅಪಮಾನವೆಂದು ತಮಗೆ ಅನಿಸಿದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಈ ರೀತಿಯ ದೌರ್ಜನ್ಯಗಳನ್ನು ಮಾಡುವುದಕ್ಕೆ ಬಿಡುವುದಿಲ್ಲ ಎನ್ನುವಂಥ ವ್ಯವಸ್ಥೆ ಮಾಡಬೇಕಾಗಿತ್ತು. ಯಾವ ಕಾನೂನಿನ ಅಡಿಯಲ್ಲಿ ಪಕ್ಷಗಳ ಮುಖಂಡರನ್ನು ಮತ್ತು ಜನತೆಯ ಪ್ರತಿನಿಧಿಗಳನ್ನು ರೈತರನ್ನು ಬೂಟ್ಸ್ ಕಾಲಿನಿಂದ ಒಡೆಯುವುದಕ್ಕೆ ಬರುತ್ತದೆ? ಅನ್ಯಾಯವಾಗಿರುವುದನ್ನು ಕೇಳುವುದಕ್ಕೆ ಹೋದವರ ಮೇಲೆ ದೌರ್ಜನ್ಯವನ್ನು ಮಾಡತಕ್ಕ ಕಾನೂನನ್ನು ಯಾವಾಗ ಕೈಗೆ

ತೆಗೆದುಕೊಂಡಿದ್ದಾರೆ? ಇಂತಹವರು ಇರುವುದರಿಂದ ನಿಮ್ಮ ಸರ್ಕಾರಕ್ಕೆ ಗೌರವ ಬರುವುದಿಲ್ಲ. ನಾನು ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಅವರು ಯಾವ ಪಕ್ಷದವರೇ ಆಗಿರಲಿ, ಇಲ್ಲಿ ಪ್ರಶ್ನೆ ಇರತಕ್ಕದ್ದು ಸತ್ಯಾಸತ್ಯತೆಗಳನ್ನು ಕಂಡುಕೊಳ್ಳಬೇಕಾಗಿದೆ. ಈಗ ಸದನ ನಡೆಯುತ್ತಿದೆ, ಇಂತಹ ಕೆಲಸಗಳನ್ನು ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆಯೇ? ಸರ್ಕಾರ ಅಧಿಕಾರಿಗಳು ಕೊಟ್ಟ ಉತ್ತರವನ್ನು ಹೇಳುವಂತಹ ವಾಡಿಕೆ ಇದೆ. ಮಾನ್ಯ ಧರ್ಮಸಿಂಗ್‌ರವರ ಬಗ್ಗೆ ನನಗೆ ಬಹಳ ಗೌರವಿದೆ. ಅವರು ಸತ್ಯವನ್ನು ಈ ಸದನಕ್ಕೆ ಹೇಳುತ್ತಾರೆನ್ನುವ ವಿಶ್ವಾಸ ನನಗಿದೆ. ಅವರು ವಿಶ್ವಾಸವನ್ನು ಕಳೆದುಕೊಂಡರೆ, ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ನಾವು ಹೇಳುವಂತಹದ್ದು ಏನೆಂದರೆ ನೀವು ಉತ್ತರ ಕೊಡುವುದಕ್ಕೆ ಮುಂಚೆ, ನಾವು ಪ್ರಸ್ತಾಪ ಮಾಡುವುದಕ್ಕೆ ಮುಂಚೆ, ನಿಮಗೆ ವಿಷಯ ಗೊತ್ತಾದ ತಕ್ಷಣ ಸಂಬಂಧಪಟ್ಟವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದೀರಾ? ಜನತೆಯ ಪ್ರತಿನಿಧಿಗಳಿಗೆ ರಕ್ಷಣೆ ಕೊಟ್ಟಿದ್ದೀರ? ಶ್ರೀಸಾಮಾನ್ಯನಿಗೆ ರಕ್ಷಣೆ ಕೊಡುವ ಶಕ್ತಿ ಇವರಿಗೆ ಇದೆಯೇ? ಇಲ್ಲ ಪೋಲೀಸ್ ಅಧಿಕಾರಿಗಳ ಕೈಗೊಂಬೆಯಾಗಿ ಈ ಸರ್ಕಾರ ನಡೆಯುವುದಾದರೆ, ಬಹುಶಃ ಒಂದು ಕ್ಷಣ ಅಧಿಕಾರದಲ್ಲಿ ಮುಂದುವರಿಯುವುದಕ್ಕೆ ತಮಗೆ ನೈತಿಕ ಹಕ್ಕು ಇಲ್ಲವೆಂದು ಹೇಳಬೇಕಾಗುತ್ತದೆ. ಉತ್ತರ ಕೊಡುವುದಕ್ಕೆ ಮುಂಚೆ ನಾನು ಅದನ್ನು ಬೆಳೆಸುವುದಕ್ಕೆ ಇಚ್ಛೆಪಡುವುದಿಲ್ಲ. ನಾನು ನೇರವಾಗಿ ತಮಗೆ ಹೇಳುತ್ತೇನೆ. ಗೃಹಸಚಿವರು ನಮ್ಮ ಜೊತೆಯಲ್ಲಿ ಬರಲಿ ಸತ್ಯಸತ್ಯತೆಯನ್ನು ನೋಡೋಣ. ನಾವು ಮಾಡುತ್ತಿರುವ ಅಪಾದನೆ ಮತ್ತು ಪತ್ರಿಕೆಗಳಲ್ಲಿ ಬಂದಿರುವುದು ಅಸತ್ಯವೆಂದು ಕಂಡು ಬಂದರೆ ಆಮೇಲೆ ನೋಡೋಣ. ಮೊದಲು ಸ್ಥಳ ಪರಿಶೀಲನೆಗೆ ತಾವು ಅವಕಾಶ ಮಾಡಿಕೊಡಬೇಕು. ಇದು ಸತ್ಯವಾದಂಥ ಮತ್ತು ನಡೆದಂಥ ಈ ಘಟನೆ ಬಗ್ಗೆ ಹಾಗೂ ತಾವು ಕ್ರಮವನ್ನು ತೆಗೆದುಕೊಂಡ ಬಗ್ಗೆ ಉತ್ತರ ಕೊಡಬೇಕೆಂದು ನಾನು ಸನ್ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು: ಅವಿಶ್ವಾಸ ನಿರ್ಣಯದ ಗೊತ್ತುವಳಿ ಸದನದ ಮುಂದಿರುವಾಗ ನಿಲುವಳಿ ಸೂಚನೆಗೆ ಯಾವ ವಿಧದಲ್ಲೂ ಕೂಡ ಆದ್ಯತೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ನಿಲುವಳಿ ಸೂಚನೆಯನ್ನು ...

ಶ್ರೀ ವಾಟಾಳ್ ನಾಗರಾಜ್: ನಿಲುವಳಿ ಸೂಚನೆಯನ್ನು ಏನು ಮಾಡಬೇಕೆನ್ನುವುದು ತಮ್ಮ ನಿರ್ಧಾರಕ್ಕೆ ಬಿಟ್ಟಿದ್ದು.

+ ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ನಾನು ನಿಲುವಳಿ ಸೂಚನೆಯನ್ನು ಕಳುಹಿಸುವುದಕ್ಕೆ ಹೋಗಿಲ್ಲ, ಪರಿಸ್ಥಿತಿ ಏನಾಗಿದೆ ಅಂದರೆ, ನಮ್ಮ ಜಿಲ್ಲೆಯಲ್ಲಿ ಇದು ನಿನ್ನೆ ಮೊನ್ನೆಯದಲ್ಲ, ಕಳೆದ ನಾಲ್ಕೈದು ವರ್ಷಗಳಿಂದಲೂ ಸತತವಾಗಿ ಇಂಥಾದ್ದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ರೈತರು ಅನೇಕ ಕಡೆ ಹೋಗಿ ವಿದ್ಯುತ್ ಕಛೇರಿಗಳಿಗೆ ಮುತ್ತಿಗೆ ಹಾಕಿದ್ದಾರೆ. ಕೋಲಾರದಲ್ಲಿ ನಾಲ್ಕೈದು ಸಾರಿ ಮುತ್ತಿಗೆ ಹಾಕಿದ್ದಾರೆ. ಮುಳಬಾಗಿಲಿನಲ್ಲಿ ಮುತ್ತಿಗೆ ಹಾಕಿದ್ದಾರೆ. ಶ್ರೀನಿವಾಸಪುರದಲ್ಲಿ ಮುತ್ತಿಗೆ ಹಾಕಿದ್ದಾರೆ, ಚಿಕ್ಕಬಳ್ಳಾಪುರದಲ್ಲಿ ಮುತ್ತಿಗೆ ಹಾಕಿದ್ದಾರೆ. ಗೌರಿಬಿದನೂರಿನಲ್ಲಿ ಮುತ್ತಿಗೆ ಹಾಕಿದ್ದಾರೆ. ಶಿಡ್ಲಘಟ್ಟದಲ್ಲಿ ಮುತ್ತಿಗೆ ಹಾಕಿದ್ದಾರೆ. ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜಿನ ಬಗ್ಗೆ ರೈತರು ಕುಪಿತರಾಗಿ ಮುತ್ತಿಗೆ ಹಾಕಿದ್ದಾರೆ. ಅವರ ರಕ್ತ ಕುದಿಯುತ್ತಿದೆ. ಸರ್ಕಾರ ಅಂತಹ ವ್ಯವಸ್ಥೆಯನ್ನು ಮಾಡುತ್ತಿದೆ. ಅದು ಅಷ್ಟು ಸಾಲದು ಎಂಬಂತೆ, ಮುಖ್ಯಮಂತ್ರಿಗಳ ಮನೆಯ ಮುಂದೆ ಸಾವಿರಾರು ಜನರು ರೈತರು ಬಂದು ಪ್ರದರ್ಶನ ಮಾಡಿದ್ದಾರೆ. ರೈತ ಮುಖಂಡರನ್ನು ನನ್ನನ್ನು ಕರೆಸಿ ನಿಗದಿಯಾದ ಕಾಲದಲ್ಲಿ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಮುಖ್ಯಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟರು. ಆದರೆ

ಯಾವ ಕೆಲಸ ಕೂಡ ಆಗಲಿಲ್ಲ. ಅನೇಕ ಸಭೆಗಳನ್ನು ಕರೆದಿದ್ದಾರೆ. ನಮ್ಮ ಜಿಲ್ಲೆಯ ಮಂತ್ರಿಗಳಾದ ಮುನಿಯಪ್ಪನವರ ಕಛೇರಿಯಲ್ಲಿ ಸಭೆ ನಡೆಯಿತು.

ಆಮೇಲೆ ವಿದ್ಯುಚ್ಛಕ್ತಿ ಮಂಡಲಿಯ ಅಧಿಕಾರಿಗಳು ಬಂದು ಕೋಲಾರದಲ್ಲಿ ಸಭೆ ನಡೆಸಿದರು. ಆದರೆ ನಾವು ಹೇಳಿದ ಯಾವ ಸಲಹೆಗಳು ಕೂಡ ಇಲ್ಲಿಯವರೆಗೆ ಕಾರ್ಯಗತವಾಗಿಲ್ಲ. ಒಂದೆರಡು ಕಡೆ ಲೈನ್ ಹಾಕುವುದು ಬಿಟ್ಟರೆ, ಒಂದೆರಡು ಕಡೆ ನಾಲ್ಕು ಟ್ರಾನ್ಸ್‌ಫರ್ಮರ್‌ಗಳನ್ನು ಹಾಕುವುದು ಬಿಟ್ಟರೆ, ಮೂಲಭೂತವಾದ ವಿದ್ಯುಚ್ಛಕ್ತಿ ಸಮಸ್ಯೆ ಏನು ಇದೆ ಅದು ಬಗೆಹರಿಯುತ್ತಿಲ್ಲ. ನಮ್ಮಲ್ಲಿ ಮಳೆ ಇಲ್ಲದೆ ಅನೇಕ ಕಡೆ ಕುಡಿಯುವ ನೀರು ಇಲ್ಲದ ಪರಿಸ್ಥಿತಿ ಉಂಟಾಗಿದೆ. ಒಂದು ಕಡೆ ಪ್ರವಾಹ ಇದ್ದರೆ, ಮತ್ತೊಂದು ಕಡೆ ಬರಗಾಲದ ಪರಿಸ್ಥಿತಿ ಇದೆ. ಅನೇಕ ಗ್ರಾಮಗಳಲ್ಲಿ ಕುಡಿಯುವದಕ್ಕೆ ನೀರು ಕೂಡ ಇಲ್ಲ. ನಮ್ಮಲ್ಲಿ ಅನೇಕ ಹಳ್ಳಿಗಳಲ್ಲಿ ನಾಲ್ಕುನೂರು ಅಡಿ, ಐದುನೂರು ಅಡಿ ಆಳದಿಂದ ನೀರು ತರುತ್ತಿದ್ದಾರೆ. ವಿದ್ಯುಚ್ಛಕ್ತಿ ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಇವತ್ತಿನ ನಮ್ಮ ರೈತರ ಜೀವವೇ ವಿದ್ಯುಚ್ಛಕ್ತಿಯಲ್ಲಿದೆ. ಇಂತಹ ಪರಿಸ್ಥಿತಿ ಇರುವಾಗ ನಾವು ಒಂದಲ್ಲ ಅನೇಕ ಸಂದರ್ಭದಲ್ಲಿ ಈ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಯಾವ ಯಾವ ವಿಧಾನಗಳನ್ನು ಅನುಸರಿಸುವುದಕ್ಕೆ ಅವಕಾಶ ಇದೆ. ಆ ಎಲ್ಲಾ ಅವಕಾಶಗಳನ್ನೂ ನಾವು ಉಪಯೋಗಿಸಿಕೊಂಡು ನಮ್ಮ ಜಿಲ್ಲೆಯಲ್ಲಿ, ಆ ಪಕ್ಷದವರು, ಈ ಪಕ್ಷದವರು ಎನ್ನದೆ, ಎಲ್ಲಾ ಪಕ್ಷದವರೂ ಸೇರಿ, ಇದಕ್ಕೆ ಪ್ರತಿಭಟನೆ ಸೂಚಿಸಿದ್ದೇವೆ. ಇಲ್ಲಿಯವರೆಗೂ ಕೂಡ ಸರಕಾರ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ. ರೈತರ ತಾಳ್ಮೆಯನ್ನು ಸರಕಾರ ಪರೀಕ್ಷೆ ಮಾಡುತ್ತಿದೆ. ಇವತ್ತು ಶ್ರೀನಿವಾಸಪುರದಲ್ಲಿ ಆಗಿರತಕ್ಕಂಥಾದ್ದು ಆ ತಾಳ್ಮೆಯ ಸ್ಫೋಟ, ಅದು ಇಷ್ಟರಲ್ಲೇ ಎಲ್ಲಾ ಕಡೆ ಹಬ್ಬಬಹುದು. ಕಳೆದ ಒಂದೆರಡು ಅದಿವೇಶನದಲ್ಲೂ ಅದನ್ನು ನಾನು ಎತ್ತಿದ್ದೆ. ಇದು ಕಾನೂನು ಸುವ್ಯವಸ್ಥೆಯನ್ನು ಪ್ರಶ್ನೆಯಾಗುತ್ತದೆ ಎಂಬ ಎಚ್ಚರಿಕೆಯ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ. ಅದರೂ ಕೂಡಾ ಸರಕಾರ ಇಲ್ಲಿಯವರೆಗೆ ಎಚ್ಚರಿಕೆ ತೆಗೆದುಕೊಂಡಿಲ್ಲ. ಇವತ್ತು ಶ್ರೀನಿವಾಸಪುರದಲ್ಲಿ ಅದರ ಸ್ಫೋಟವಾಗಿದೆ. ಇಡೀ ಜಿಲ್ಲೆಯಾದ್ಯಂತ ಇದರ ಸ್ಫೋಟ ಖಂಡಿತವಾಗಿ ಆಗುತ್ತದೆ.

ಶ್ರೀ ಟಿ.ಎಂ. ಮಂಜುನಾಥ್: ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಅಫ್ ಆರ್ಡರ್.

ಶ್ರೀ ಸಿ. ಬೈರೇಗೌಡ: ಇದರಲ್ಲೇನು ಪಾಯಿಂಟ್ ಅಫ್ ಆರ್ಡರ್ ಸ್ವಾಮಿ ಶ್ರೀ ಟಿ.ಎಂ. ಮಂಜುನಾಥ್ ಸ್ವಲ್ಪ ಸಮಾಧಾನವಾಗಿರಿ. ನಾವು ಏತಕ್ಕೆ ಹೇಳುತ್ತೇವೆ ಎಂದರೆ, ಸನ್ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಮ್ಮ ಯಡಿಯೂರಪ್ಪನವರು ಆಗಲೇ ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ ; ನಾವೂ ಹೇಳುವುದು ಇದೆ.

ಶ್ರೀ ವಾಟಾಳ್ ನಾಗರಾಜ್: ನಾವು ಹೇಳುವುದು ಬೇಡವೇ? ನಮಗೆ ಅವಕಾಶ ಬೇಡವೇ? ಎಷ್ಟೊಂದು ಹೋರಾಟ ನಡೆದಿದೆ. ತಾವು ರೈತರ ಕಡೆಯಿಂದ ಬಂದವರು. ಏನು ನಿಮ್ಮ ಕ್ರಿಯಾಲೋಪ? ಕ್ರಿಯಾಲೋಪ ಏನಿದೆ ಇದರಲ್ಲಿ? ಇದು ಕ್ರಿಯಾಲೋಪವಲ್ಲ ಇದು ರೈತರ ವಿರೋಧಿ ನೀತಿ ಎಂದು ಹೇಳಬೇಕಾಗುತ್ತೆ. ಇದು ಸರಿಯಲ್ಲ.

ಶ್ರೀ ಟಿ.ಎಂ. ಮಂಜುನಾಥ್: ಮಾತನಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಜನರ ಪ್ರತಿನಿಧಿಗಳಿಗೆ ಬೂಟ್ಸ್‌ನಿಂದ ಹೊದೆಯುವುದು ಇದು ಗೌರವ ತರುವ ವಿಷಯವೇ?

ಶ್ರೀ ಟಿ.ಎಂ. ಮಂಜುನಾಥ್: ಮಾನ್ಯ ಅಧ್ಯಕ್ಷರೆ, ನಾನು ಅವರ ಹೇಳಿಕೆಯನ್ನು ವಿರೋಧ ಮಾಡಲಿಲ್ಲ. ತಾವು ದಯವಿಟ್ಟು ಅವಕಾಶ ಕೊಡಿ. ಈ ವಿಷಯದಲ್ಲಿ ಅವರಿಗೆ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಕಳಕಳಿ ಇದೆ.

ಶ್ರೀ ವಾಟಾಳ್ ನಾಗರಾಜ್: ನಿಮ್ಮ ಕಳಕಳಿ ಎಂದರೆ ಬೂಡ್ಸ್ ಏಟು ಹೊಡೆಸುವುದು. ರೈತರಿಗೆ ಪೋಲೀಸರು ಹೊಡೆಯುವುದು, ಇದು ಹುಡುಗಾಟವೇ?

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್: ವಾಟಾಳ್ ನಾಗರಾಜ್‌ರವರೇ, ನಿಮ್ಮ ಪಕ್ಷದವರು ಯಾರೋ ಹೊಡೆದರೆ ಅದು ಬೂಡ್ಸ್‌ನಿಂದ ಹೊಡೆದೆ ಹಾಗೆ ಆಯಿತೇ? ನೀವು ಸ್ವಲ್ಪ ಗಂಭೀರವಾಗಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಇದು ನೇರವಾಗಿ ಸರಕಾರಕ್ಕೇ ಬರುತ್ತದೆ, ನೀವು ಜವಾಬ್ದಾರಿ ಹೊರಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಕಳೆದ ತಿಂಗಳು 27ನೇ ತಾರೀಖಿನ ದಿವಸ ಬಂಗಾರುಪೇಟೆ ಮತ್ತು ಗೌರಿಬಿದನೂರು ತಾಲ್ಲೂಕುಗಳಲ್ಲಿ ರೈಲನ್ನು ನಿಲ್ಲಿಸತಕ್ಕ ಪ್ರಯತ್ನ ಮಾಡಿದ್ದಾರೆ.

ಅಧ್ಯಕ್ಷರು: ಈಗ ಶ್ರೀನಿವಾಸಪುರದ್ದು ಪ್ರಸ್ತಾಪ ಮಾಡುತ್ತಿದ್ದಾರೆ. ವಾಟಾಳ್ ನಾಗರಾಜ್‌ರವರೇ ನೀವು ಹೇಳಿ.

ಶ್ರೀ ಸಿ. ಬೈರೇಗೌಡ : ಶ್ರೀನಿವಾಸಪುರದಲ್ಲಿ ಇವತ್ತಿನದಿವಸ ತಮ್ಮ ಕಷ್ಟ ಏನು ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಹೇಳುವುದಕ್ಕೆ ಹೋದಂಥ ಸಂದರ್ಭದಲ್ಲಿ ರೈತರನ್ನು ಬೂಟ್ ಕಾಲಿನಲ್ಲಿಯೇ ಒದೆಯುವುದು? ಅಧ್ಯಕ್ಷರೇ ರೈತರನ್ನು ಬೂಟ್ ಕಾಲಿನಲ್ಲಿ ಒದೆಯುವುದೇ? ರೈತರು ಅಷ್ಟು ನಿಕೃಷ್ಟರಾಗಿದ್ದಾರೆಯೇ? ರೈತರು ಏನು ಕಸಕ್ಕಿಂತ ಕಡೆಯಾಗಿದ್ದಾರೆಯೇ? ಇವರು ರೈತರನ್ನು ಏನೆಂದು ತಿಳಿದುಕೊಂಡಿದ್ದಾರೆ? ಇವತ್ತಿನ ದಿವಸ ರಕ್ತ ಕುದಿಯುತ್ತಿದೆ. ಸರಕಾರ ಇವತ್ತಿನ ದಿವಸ ರೈತರನ್ನು ಬೂಟ್‌ಕಾಲಿನಲ್ಲಿ ಒದೆಯುವುದಾದರೆ, ಯಾರು ಸಂಬಂಧಪಟ್ಟವರು ಇರುತ್ತಾರೆ. ಅವರಿಗೆ ಕೂಡ ಆ ಬೂಟ್‌ನಿಂದ ಪೂಜೆಯಾಗುತ್ತದೆ ಎಂದು ಎಚ್ಚರಿಕೆ ವಹಿಸಬೇಕಾಗುತ್ತದೆ. ಇದು ಯಾರೇ ಆಗಿರಲಿ, ಎಲ್ಲಿರತಕ್ಕಂಥ ರೈತರು ಎಂದರೆ ಇಡೀ ದೇಶದಲ್ಲಿರತಕ್ಕಂಥ ರೈತರು. ಆ ರೈತರನ್ನು ಬೂಟ್ ಕಾಲಿನಲ್ಲಿ ಒದೆಯುವುದು ಎಂದರೆ ಅರ್ಥ ಏನು? ಮೂರು ದಿವಸದ ಹಿಂದೆ ಈ ಘಟನೆ ನಡೆದಿದೆ. ಸರಕಾರ ಅಥವಾ ಬೇರೆ ಯಾರು ಏನು ಮಾಡಿದ್ದಾರೆ. ಅವರ ಹತ್ತಿರ ದೂರು ಇರಬಹುದು. ಅವರ ಮೇಲಿರತಕ್ಕಂಥ ಆಪಾದನೆ ಏನು ಎಂದರೆ, ತಾಲ್ಲೂಕು ಕಛೇರಿಗೆ ನುಗ್ಗಿದರು, ಕುರ್ಚಿ ಎತ್ತಿ ಬಿಸಾಕಿದರು ಎಂದು ನಾಲ್ಕು ಕುರ್ಚಿ ಮುರಿದು ಹೋದರೆ ಏನು ಗಂಟು ಹೋಗುತ್ತದೆ? ನಾಲ್ಕು ಖುರ್ಚಿ ಮುರಿದಿರಬಹುದು, ಇಲ್ಲ ಎಂದು ಹೇಳುವುದಿಲ್ಲ, ಅದು ಸರಿ ಎಂದೂ ನಾನು ಹೇಳುವುದಿಲ್ಲ. ನಾಲ್ಕು ಕುರ್ಚಿ ಮುರಿದು ಹೋದುದಕ್ಕೆ ರೈತರನ್ನು ಬೂಟ್ ಕಾಲಿನಲ್ಲಿ ಒದೆಯುವುದು, ಆಸ್ಪತ್ರೆಯಲ್ಲಿ ಹೋಗಿ ಬಟ್ಟೆ ಬಿಚ್ಚಿ ಹೊಡೆಯುವುದು, ಇದು ಮನುಷ್ಯರು ಮಾಡುವ ಕೆಲಸವೇ? ಇಂತಹ ಹೇಯವಾದ ಕೆಲಸಕ್ಕೆ ಸರಕಾರ ಕೈಹಾಕಿದೆ. ರೈತರು ತಮ್ಮ ನಿಜವಾದ ಕಳಕಳಿಯನ್ನು, ಸಮಸ್ಯೆಯನ್ನು ಸರಕಾರ ಅಧಿಕಾರಿಗಳ ಮುಂದೆ ಅಲ್ಲದೆ, ಇನ್ನು ಯಾರ ಮುಂದೆ ಹೇಳಿಕೊಳ್ಳಬೇಕು, ಅವರಿಗಿರತಕ್ಕಂಥ ಕಷ್ಟಕ್ಕೆ ಯಾರು ಆಗಬೇಕಾಗಿದೆ, ನನಗೆ ಕಷ್ಟ ಒದಗಿದರೆ ನಾನು ಯಾರ ಹತ್ತಿರ ಹೋಗಬೇಕು. ನಾಲ್ಕು ಕುರ್ಚಿ ಮುರಿದು ಹೋಗಿದ್ದಕ್ಕೆ ಇವತ್ತು ಮುಖಂಡರಾಗಿರತಕ್ಕಂಥವರನ್ನು ರೈತರನ್ನು ಹಗಲು ರಾತ್ರಿ ಕಷ್ಟವನ್ನು ಅನುಭವಿಸಿರತಕ್ಕಂಥವರನ್ನು, ಬೂಟ್ ಕಾಲಿನಲ್ಲಿ ಒದೆಯತಕ್ಕದ್ದು, ಆಸ್ಪತ್ರೆಗೆ ನುಗ್ಗಿ ಒದೆಯತಕ್ಕದ್ದು ಸರಿಯೇ?

ಇದರ ಬಗ್ಗೆ ತೀವ್ರವಾಗಿ ಅಂದೋಲನ ನಮ್ಮ ಜಿಲ್ಲೆಯಲ್ಲೇ ಅಲ್ಲ. ರಾಜ್ಯದಲ್ಲೂ ಕೂಡಾ ನಡೆಯುತ್ತದೆ. ನಮ್ಮ ಜಿಲ್ಲೆಯಲ್ಲಿ ಇದನ್ನು ಸುಮ್ಮನೆ ಬಿಡುವುದಿಲ್ಲ ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಎಚ್ಚರಿಕೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ರೈತರನ್ನು ಅಷ್ಟು ಲಘುವಾಗಿ ಕಾಣತಕ್ಕಂಥಾದ್ದಾಗಲಿ ಲಘವಾಗಿ, ತೀರ್ಮಾನ ಮಾಡತಕ್ಕಂಥದ್ದಾಗಲಿ, ಅಷ್ಟು ಹೀನವಾಗಿ ನಡೆಸಿಕೊಳ್ಳತಕ್ಕಂಥದ್ದಾಗಲಿ. ಇಂತಹ ಹೀನ ಕೃತ್ಯಕ್ಕೆ ಸರಕಾರ ತಲೆಹಾಕತಕ್ಕಂಥದ್ದಾಗಲಿ, ಇದನ್ನು ನಾವು ತಡೆಯುವುದಕ್ಕಾಗುವುದಿಲ್ಲ ಎನ್ನತಕ್ಕ ಮಾತನ್ನು ನಾನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಮತ್ತು ಇವತ್ತಿನದಿವಸ ವಿದ್ಯುಚ್ಛಕ್ತಿ ಬಗ್ಗೆ ಏನು ನಡಸಿದ್ದೀರಿ, ಅಸಮರ್ಪಕ ವಿದ್ಯುಚ್ಛಕ್ತಿ ಸರಬರಾಜನಿಂದ ಇವತ್ತಿನ ದಿವಸ ರೈತರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸದಿದ್ದರೆ ಇಡೀ ಜಿಲ್ಲೆಯಾದ್ಯಂತ ಬೆಂಕಿ ಬೀಳುತ್ತದೆ. ಇದನ್ನು ಸರ್ಕಾರ ಗಮನಿಸಬೇಕು. ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಇದರ ಬಗ್ಗೆ ತೀವ್ರವಾದ ಹೇಳಿಕೆ ಕೊಡಬೇಕು. ಮೊದಲು ಇವತ್ತು ಮುಖ್ಯವಾಗಿ ನಮಗೆ ಸಮಸ್ಯೆ ಬಗೆಹರಿಯಬೇಕು. ಆ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನತಕ್ಕಂಥಾದ್ದನ್ನು ಹೇಳಬೇಕು. ಕಾರಣವೇನೆಂದರೆ, ಅವರು ಹೇಳಿರತಕ್ಕಂಥಾದ್ದು ಇವತ್ತಿನವರೆಗೂ ಕೂಡ ಯಾವುದೂ ಜಾರಿ ಆಗಿಲ್ಲ ನಡೆದಿಲ್ಲ, ರೈತರನ್ನು ಟೇಕನ್ ಫಾರ್ ಗ್ರ್ಯಾಂಟೆಡ್ ಎಂದು ತಿಳಿದುಕೊಂಡಿದ್ದಾರೆ. ದಯವಿಟ್ಟು ತಾವು ಸರ್ಕಾರಕ್ಕೆ ಸೂಚನೆ ಕೊಡಬೇಕು, ಇದರ ಬಗ್ಗೆ ಸರಿಯಾದಂತಹ ಹೇಳಿಕೆ ಕೊಡಬೇಕು, ಈ ಸಮಸ್ಯೆ ಬಗೆಹರಿಸತಕ್ಕಂಥಾದ್ದಕ್ಕೆ ಅವರು ಮುಂದಾಗಬೇಕು ಎಂದು ನಾನು ಹೇಳುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆ ಬಹಳ ಗಂಭೀರವಾದಂತಹ ಸಮಸ್ಯೆ. ನಾವು ಮೊನ್ನೆ ಮಾನ್ಯ ಬೈರೇಗೌಡರ ಜೊತೆಯಲ್ಲಿ ಅವರ ಜಿಲ್ಲೆಗೆ ಯಾವು ಯಾವುದೋ ವಿಚಾರಗಳಿಗೆ ಹೋಗಿದ್ದೆವು. ತಮಗೆ ನಾನು ಹೇಳುವುದಾದರೆ, ಈಗ ಇಡೀ ಶ್ರೀನಿವಾಸಪುರ ಒಂದು ರೀತಿ ತುರ್ತು ಪರಿಸ್ಥಿತಿ ಘೋಷಣೆಯಾದಂತೆ ಇದೆ. ಅಲ್ಲಿನ ಜನಗಳು ಬಹಳ ಭಯಭೀತಿಯಿಂದ ಇದ್ದಾರೆ. ಎಲ್ಲೆಲ್ಲೂ ಪೋಲೀಸಿನವರ ಒಂದು ಭಯೋತ್ಪಾದನೆ ಇದೆ. ಪೋಲೀಸಿನವರೇ ರೈತರ ಮೇಲೆ ಧಾಳಿ ಮಾಡತಕ್ಕಂಥ ಭಯೋತ್ಪಾದನೆ ಉದ್ಭವವಾಗಿದೆ. ಇವತ್ತು ಯಾವ ರೈತ ಮುಖಂಡರುಗಳು ಪೋಲೀಸ್ ಸ್ಟೇಷನ್‌ಗೆ ಹೋಗಿ ನಡೆದಿರತಕ್ಕಂಥ ಅನ್ಯಾಯವನ್ನು ಕೇಳುವುದಕ್ಕೆ ಹೋದಾಗ, ಮನವಿ ಸಲ್ಲಿಸಲು ಹೋದಾಗ ನ್ಯಾಯವನ್ನು ಕೇಳುವುದಕ್ಕೆ ಹೋದಾ ಆರೀತಿ ಕೇಳುವುದಕ್ಕೆ ಹೋದವರನ್ನೇ ಬೂಟ್‌ನಿಂದ ಹೊಡೆದಿದ್ದಾರೆ. ನಾನು ತಮ್ಮ ಮೂಲಕ ಹೇಳುತ್ತೇನೆ. ಇದರ ಬಗ್ಗೆ ಸಮಗ್ರವಾಗಿ ಕೂಡಲೆ ನ್ಯಾಯಾಂಗ ತನಿಖೆ ಆಗಲೇಬೇಕು.........

ಅಧ್ಯಕ್ಷರು: ಸಮಗ್ರವಾಗಿ.

ಶ್ರೀ ವಾಟಾಳ್ ನಾಗರಾಜ್: ಹೌದು ಸಮಗ್ರವಾಗಿ ಕೂಡಲೇ ತನಿಖೆ ಆಗಬೇಕು. ಈ ಸದನದ ಈ ಸರ್ಕಾರ ಇದರ ಬಗ್ಗೆ ಒಪ್ಪಿಕೊಳ್ಳಬೇಕು. ಇಲ್ಲದಿದ್ದರೆ ಇದರ ಬಗ್ಗ ಒಂದು ದೊಡ್ಡ ಹೋರಾಟ ಶುರುವಾಗುತ್ತದೆ, ಭಾರಿ ದಾಳಿ ಶುರುವಾಗುತ್ತದೆ ಎನ್ನುವ ಮಾತನ್ನು ಹೇಳುತ್ತಾ ಇದ್ದೇನೆ. ಇದನ್ನು ಪೋಲೀಸ್ ರಾಜ್ಯ ಮಾಡುವುದಕ್ಕೆ ಸರ್ಕಾರ ಹೋಗಬಾರದು. ನಾನು ಇವತ್ತು ಹೇಳುತ್ತೇನೆ. ಪೋಲೀಸ್ ಮಂತ್ರಿಗಳ ಬಗ್ಗೆ ನಮಗೆ ಗೌರವ ಇದೆ, ಕಳಕಳಿ ಇದೆ. ಬಹುಶಃ ಅವರ ಕೈ ತಪ್ಪಿರಬಹುದು, ಬಹುಶಃ ಅವರ ಇಲಾಖೆ ಅವರ ಕೈಯಲ್ಲಿ ಇಲ್ಲ, ಪರಿಸ್ಥಿತಿ ಕೈ ಮೀರಿ ಹೋಗಿದೆ ಎನ್ನತಕ್ಕಂಥ ಮಾತನ್ನು ತಮ್ಮ ಮೂಲಕ ಹೇಳಿ, ಈ ರೈತರಿಗೆ ಆಗಿರತಕ್ಕಂಥ ಅನ್ಯಾಯವನ್ನು ಸರಿಪಡಿಸಲು ಸಮಗ್ರವಾದ ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಶ್ರೀನಿವಾಸಪುರದಲ್ಲಿ ನಡೆದಿರತಕ್ಕಂಥ ಘಟನೆ ಏನು ಇದೆ ಈ ಘಟನೆಗೆ ಮೂಲ ಕಾರಣಕರ್ತವಾಗಿರತಕ್ಕಂಥ ವಿಚಾರಗಳನ್ನು ನಾವು ಈ ಸದನದಲ್ಲಿ ಬಹಳ ಸಾರಿ ಪ್ರಸ್ತಾಪ ಮಾಡಿದ್ದೇವೆ. ನಾನಂತು ಮಾತನಾಡಿದಾಗಲೆಲ್ಲಾ ಅಸಮರ್ಪಕ ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಮತ್ತು ಗೊಬ್ಬರ ಸಿಗದೆ ಇರತಕ್ಕಂಥ ವಿಚಾರದ ಬಗ್ಗೆ ಬಹಳ ತೀವ್ರವಾಗಿ ಹೇಳಿದಾಗ ಮಾನ್ಯ ಕೃಷಿ ಸಚಿವರು ಇದನ್ನು ಅಲ್ಲಗಳೆದರು. ಇಲ್ಲ, ಎಷ್ಟು ಬೇಕಾದರೂ, ಎಲ್ಲಿ ಬೇಕಾದರೂ ಗೊಬ್ಬರ ಸಿಗುತ್ತದೆ, ಕೊಡಿಸತಕ್ಕಂಥ ಜವಾಬ್ದಾರಿ ಸರ್ಕಾರ ತೆಗೆದುಕೊಳ್ಳುತ್ತದೆ. ಎನ್ನತಕ್ಕಂಥ ಮಾತನ್ನು ಹೇಳಿದರು. ಮಾನ್ಯ ಭೈರೇಗೌಡ, ಮಾನ್ಯ ವೆಂಕಟಪ್ಪನವರು, ಆಡಳಿತ ಪಕ್ಷದ ಸದಸ್ಯರು, ಮಾನ್ಯ ಜಾಲಪ್ಪನವರು ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಈ 3-4 ಜಿಲ್ಲೆಗಳಲ್ಲಿರತಕ್ಕಂಥ ಪರಿಸ್ಥಿತಿ ಬಗ್ಗೆ ಪದೇ ಪದೇ ನಾವು ಸರ್ಕಾರದ ಗಮನಕ್ಕ ತಂದಿದ್ದೇವೆ. ಆದರೆ ಈ ಸರ್ಕಾರಕ್ಕೆ ಕಿವಿ, ಕಣ್ಣು ಇದೆಯೋ ಇಲ್ಲವೋ ನಮಗಂತೂ ಅರ್ಥವಾಗುತ್ತಿಲ್ಲ. ನಾನು ಕಳೆದ ಸಲ ಎಚ್ಚರಿಕೆಯನ್ನು ಸಹ ಸರ್ಕಾರಕ್ಕೆ ಕೊಟ್ಟಿದ್ದೇನೆ. ಇದೇ ರೀತಿಯಲ್ಲಿ ನೀವು ಪರಿಸ್ಥಿತಿಯನ್ನು ಸುದಾರಣೆ ಮಾಡಲಿಕ್ಕೆ ಪ್ರಯತ್ನಯನ್ನು ಪ್ರಾಮಾಣಿಕವಾಗಿ ಮಾಡದಿದ್ದರೆ ಕಾನೂನು ಅನ್ನು ನೀವು ತಡೆಯತಕ್ಕಂಥಾದ್ದಕ್ಕೆ ಬಹಳ ಕಷ್ಟವಾಗುತ್ತದೆ, ನಿಮ್ಮ ಕೈಯಲ್ಲಿ ಕಾನೂನು ಸುಧಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದೆ, ಪರಿಸ್ಥಿತಿ ಬಹಳ ಹದಗೆಡುತ್ತದೆನ್ನುವ ಮಾತನ್ನು ಸಹ ಹೇಳಿದ್ದೆ. 1982 ನೇ ಇಸವಿಯಲ್ಲಿ ತಾವು ಸಹ ಮಂತ್ರಿಗಳಾಗಿದ್ದವರು, ತಮಗೂ ಜ್ಞಾಪಕ ಇರಬಹುದು. ಒಂದು ಕಾಲ ಇತ್ತು. ಅಧಿಕಾರಿಗಳು, ತಹಶೀಲ್ದಾರ್‌ಗಳು ಇರಬಹುದು. ಸರ್ಕಲ್ ಇನ್ಸ್‌ಪೆಕ್ಟರ್ ಇರಬಹುದು, ಬಿ.ಡಿ.ಓ. ಇರಬಹುದು, ಅವರು ಕಛೇರಿಗಳಲ್ಲಿ ಕುಳಿತುಕೊಂಡು ಕೆಲಸ ಮಾಡತಕ್ಕಂಥಾದ್ದೇ ಬಹಳ ಕಷ್ಟವಾಗುತ್ತಿತ್ತು. ನರಗುಂದ ಮತ್ತು ನವಲಗುಂದಗಳಲ್ಲಿ ಘಟನೆಯಾದಾಗ ಈ ಪರಿಸ್ಥಿತಿ ಇತ್ತು. ಇವತ್ತು ಮೂಲ ಭೂತ ಸಮಸ್ಯೆ ಏನಿದೆ ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ರೈತರು ಏಕೆ ಈರೀತಿ ಮಾಡುತ್ತಾ ಇದ್ದಾರೆಂದು ತಾವು ಅರ್ಥ ಮಾಡಿಕೊಳ್ಳಬೇಕು. ಅವರಿಗೆ ವಿದ್ಯುಚ್ಛಕ್ತಿ ಸಿಗುತ್ತಿಲ್ಲ. ಮಳೆ ಬೀಳುತ್ತಿಲ್ಲ. ಸರಿಯಾದ ಬೆಲೆಗೆ, ದುಡ್ಡು ಕೊಟ್ಟರೂ ಸಹ, ಬ್ಲಾಕ್‌ನಲ್ಲೂ ಸಹ ಗೊಬ್ಬರ ಸಿಗುತ್ತಿಲ್ಲ. ಇವೆಲ್ಲಾ ಕಾರಣಗಳನ್ನು ತಾವು ಅರ್ಥಮಾಡಿಕೊಳ್ಳಬೇಕು. ಈ ಘಟನೆ ನಡೆದು ಮೂರು ದಿವಸಗಳಾಗಿದೆ. ಸಂಬಂಧಪಟ್ಟ ಮಂತ್ರಿಗಳೇನಾದರೂ ಅಲ್ಲಿಗೆ ಹೋಗಿದ್ದಾರೆಯೇ? ಜಿಲ್ಲೆಗೆ ಒಬ್ಬ ಮಂತ್ರಿ ಎಂದು ಮಾಡಿದ್ದೀರಿ. ಆ ಜಿಲ್ಲಾ ಮಂತ್ರಿಗಳೆನಾದರೂ ಅಲ್ಲಿಗೆ ಹೋಗಿ ಬಂದಿದ್ದಾರೆಯೇ? ನೀವು ದಯಮಾಡಿ ಹೇಳಿ. ರೈತರ ಬಗ್ಗೆ ನಮಗೆ ಕಾಳಜಿ ಇದೆ ಎಂದು ಮಾನ್ಯ ಮಂಜುನಾಥ್‌ರವರು ಇಲ್ಲಿ ಹೇಳುತ್ತಾರೆ. ಜಿಲ್ಲೆಗೆ ಒಬ್ಬರೋ ಇಬ್ಬರೋ ಮಂತ್ರಿಗಳು ಎಂದು ನೇಮಕ ಮಾಡಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಹೋಗುವುದಕ್ಕೆ ಆಗುವುದಿಲ್ಲ. ಮಾನ್ಯ ಗೃಹ ಸಚಿವರು ಹೋಗುವುದಕ್ಕೆ ಆಗುವುದಿಲ್ಲ. ಕಾರಣ ನಾನು ಅರ್ಥಮಾಡಿಕೊಳ್ಳಬಲ್ಲೆ, ಏಕೆಂದರೆ ಸದನ ನಡೆಯುತ್ತಿದೆ. ಕೊನೆಯ ಪಕ್ಷ ಸಂಬಂಧಪಟ್ಟ ಮಂತ್ರಿಗಳು ಹೋಗಿ, ಅವರನ್ನು ಕರೆಸಿ ಮಾತನಾಡಿ ಅಲ್ಲಿ ಏನಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲ. ಅಲ್ಲಿ ಆಗಿರತಕ್ಕಂಥಾದ್ದನ್ನು ಸದನಕ್ಕೆ ತಿಳಿಸತಕ್ಕಂಥ ಸೌಜನ್ಯವನ್ನೂ ಸಹ ತಾವು ತೋರಿಸಲಿಲ್ಲ. ಇದು ಒಂದನೆಯದು.

ಎರಡನೆಯದಾಗಿ ಅಲ್ಲಿರತಕ್ಕಂಥ ಅಧಿಕಾರಿಗಳು ಮಾಜಿ ಶಾಸಕರಾದ ಮಾನ್ಯ ರಮೇಶ್ ಕುಮಾರ್‌ರವರು ನನಗೆ ತಿಳಿಸಿದರು. ಅದನ್ನು ಮಾನ್ಯ ಗೃಹ ಮಂತ್ರಿಗಳ ಗಮನಕ್ಕೆ ನಾನು ತರುತ್ತಿದ್ದೇನೆ. ಅಲ್ಲಿರತಕ್ಕಂಥ ಅಧಿಕಾರಿಗಳು ಒಹೋ ನಿಮಗೆ ಕರೆಂಟ್ ಬೇಕೇ ತೆಗೆದುಕೊಳ್ಳಿ ಒಂದು ಒದೆ, ನಿಮಗೆ ಕರೆಂಟ್ ಬೇಕೇನು

ತೆಗೆದುಕೊಳ್ಳಿ ಇನ್ನೊಂದು ಎಂದು ಹೇಳುತ್ತಿದ್ದರಂತೆ. ನಿಮಗೆ ಗೊಬ್ಬರ ಬೇಕಾದರೆ ಏನು ಮಾಡುತ್ತೇನೆ ನೋಡಿ ಎಂದು ಹೇಳಿ, ಅವಾಚ್ಯ ಶಬ್ದಗಳನ್ನು ಉಪಯೋಗಿಸುತ್ತಿದ್ದರಂತೆ. ಇದನ್ನು ಕೇಳಿ ನನಗೆ ಬಹಳ ನೋವಾಗಿದೆ. ತಾವು ಇದರ ಬಗ್ಗೆ ತನಿಖೆ ಮಾಡಿಸುತ್ತೇನೆಂದು ನಿನ್ನೆ ಕೌನ್ಸಿಲ್‌ನಲ್ಲಿ ಹೇಳಿದ್ದೀರಿ. ತನಿಖೆಯನ್ನು ಮೇಲಧಿಕಾರಿಗಳಿಂದ ಮಾಡಿಸುತ್ತೇವೆಂದು ಹೇಳಿದ್ದೀರಿ. ಸಾಮಾನ್ಯವಾಗಿ ಮೇಲಧಿಕಾರಿಗಳು ಏನು ಮಾಡುತ್ತಾರೆ? ನಾವೂ ಸರ್ಕಾರ ನಡೆಸಿದ್ದೇವೆ, ಈಗ ನೀವು ಸರ್ಕಾರ ನಡೆಸುತ್ತಿದ್ದೀರಿ, ಮತ್ತೆ ನಾಳೆ ನಾವೇ ನಡೆಸಬಹುದು. ಅವರು ಏನು ಮಾಡುತ್ತಾರೆಂದರೆ, ಡಿಪೆಂಡ್ ಮಾಡಿಕೊಳ್ಳುತ್ತಾರೆ. ಕೆಳಮಟ್ಟದ ಅಧಿಕಾರಿಗಳು ನಮಗೆ ಎಲ್ಲಿ ಬರುತ್ತಾದೋ ಅವರು ಹೆಡ್ ಕ್ವಾರ್ಟ್‌ರ್‌ನಲ್ಲಿ ಇರುತ್ತೇವೋ ಇಲ್ಲವೋ ಎಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅದಕ್ಕೋಸ್ಕರ ನೀವು ಇದರ ಬಗ್ಗೆ ಸರ್ಕಾರದ ಅಧಿಕಾರಿಗಳಿಂದ ತನಿಖೆ ಮಾಡಿಸಿದರೆ ಇದರಿಂದ ಏನೂ ಉಪಯೋಗವಾಗುವುದಿಲ್ಲವೆಂದು ನಾನು ಹೇಳುತ್ತೇನೆ. ದಯವಿಟ್ಟು ಇದನ್ನು ಬಿಟ್ಟು ಒಂದು ನ್ಯಾಯಾಂಗ ತನಿಖೆ ಮಾಡಿಸಲಿಕ್ಕೆ ಪ್ರಯತ್ನ ಮಾಡಿ. ಇಲ್ಲದೆ ಹೋದರೆ ಪರಿಸ್ಥಿತಿ ಹದಗೆಡುತ್ತದೆ. ಇವತ್ತು ಕೋಲಾರದಲ್ಲಿ ನಡೆಯುತ್ತಿದೆ, ನಾಳೆ ಕನಕಪುರದಲ್ಲಿ ನಡೆಯಬಹುದು ಮಾನ್ಯ ಅಧ್ಯಕ್ಷರೆ, ಮತ್ತೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಬೇಕೆಂದಿದ್ದೆ ನಾನು ತಡವಾಗಿ ಬಂದೆ. ಇವತ್ತು ನಮ್ಮ ತಾಲ್ಲೂಕಿನಿಂದ ಒಬ್ಬ ಮಂತ್ರಿಗಳಿದ್ದಾರೆ. ಕಳೆದ 4 ತಿಂಗಳುಗಳಿಂದ ನಮ್ಮ ತಾಲ್ಲೂಕಿನಲ್ಲಿ ವಿದ್ಯುಚ್ಛಕ್ತಿ ಇಲ್ಲ. ಬರ್‌ಸ್ಟ್ ಆಗಿದೆ. ಕೆ.ಇ.ಬಿ.ಯವರು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೇ? ಹೀಗಾದರೆ ರೈತರು ಏನು ಮಾಡಬೇಕು? ನಮಗೂ ಸಹಾ ಇತಿಮಿತಿ ಇದೆ. ಸರ್ಕಾರದ ಪರಿಸ್ಥಿತಿ ನಮಗೆ ಅರ್ಥವಾಗುತ್ತದೆ. ನಾವು ವಿರೋಧ ಪಕ್ಷದಲ್ಲಿದ್ದೇವೆಂದು ಬೇಜವಾಬ್ದಾರಿಯಿಂದ ಮಾತನಾಡುವುದಕ್ಕೆ ತಯಾರಿಲ್ಲ. ಆದರೆ ನಮ್ಮ ಸಹನೆಗೂ ಒಂದು ಮಿತಿ ಇದೆ. ಎನ್ನುವುದನ್ನು ದಯಮಾಡಿ ಅರ್ಥಮಾಡಿಕೊಳ್ಳಿ. ನಮಗೆ ಎರಡು ಗಂಟೆ, ಮೂರು ಗಂಟೆ ವಿದ್ಯುಚ್ಛಕ್ತಿ ಇಲ್ಲ. ನಾನು ಪದೇ ಪದೇ ಕೆ.ಇ.ಬಿ. ಅಧಿಕಾರಿಗಳಿಗೆ ಹೇಳಿದ್ದೇನೆ. ನೀವು ಹೇಳಿಕೊಂಡೇ ಇರಿ ನಾವು ಮಾಡಿದ್ದೇ ಮಾಡುತ್ತೇವೆಂದು ಹೇಳುತ್ತಾರೆ. ನಮ್ಮ ಸಹನೆಗೆ ಮಿತಿ ಇದೆ. ದಯಮಾಡಿ ಇದನ್ನು ಅರ್ಥ ಮಾಡಿಕೊಂಡು ಸರ್ಕಾರ ಒತ್ತಾಯ ಮಾಡಬೇಕೆಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಚೌಡರೆಡ್ಡಿ: ನಾನು ಯಾರ ಮೇಲೂ ಹೇಳುತ್ತಿಲ್ಲ, ಮೊನ್ನೆ ಇಲ್ಲಿ ಒಂದು ಗಮನಸೆಳೆಯುವ ಸೂಚನೆ ಕಳುಹಿಸಿದ್ದೆ. ಅಲ್ಲಿ ಇದಕ್ಕೆ ಸಂಬಂಧಪಟ್ಟಂತೆ,...

ಅಧ್ಯಕ್ಷರು : ಶ್ರೀನಿವಾಸಪುರದ್ದು ಹೇಳಿ.

ಶ್ರೀ ಚೌಡರೆಡ್ಡಿ : ನಾನು ಯಾರ ಮೇಲಾದರೂ ಆಪಾದನೆ ಮಾಡುತ್ತಿಲ್ಲ, ಹಕ್ಕುಪತ್ರಗಳ ಬಗ್ಗೆ,

(ಗೊಂದಲ)

ಅಧ್ಯಕ್ಷರು : ಚೌಡರೆಡ್ಡಿಯವರೆ, ದಯವಿಟ್ಟು ನನ್ನನ್ನು ಸ್ವಲ್ಪ ಕ್ಷಮಿಸಿಬಿಡಿ. ನಿಮನ್ನು ಕರೆದು ನನ್ನ ಮೇಲೆ ನಾನೆ......

(ಗೊಂದಲ)

ಅಧ್ಯಕ್ಷರು : ನಿಮ್ಮ ಹಕ್ಕುಪತ್ರಗಳು ಇವೆಯಲ್ಲಾ ಅದನ್ನು ಡಿಮ್ಯಾಂಡ್ ಬರುತ್ತದೆ, ಆಗ ಚರ್ಚೆ ಮಾಡುವುದಕ್ಕೆ ನಿಮಗೆ ಅವಕಾಶ ಕೊಡುತ್ತೇನೆ. ಈಗ ಮಾನ್ಯ ಗೃಹ ಮಂತ್ರಿಗಳು,

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆವು. ನಾವು ಸೈನ್ ಹಾಕಿದ್ದೇವೆ.

ಅಧ್ಯಕ್ಷರು : ನಿಮ್ಮ ನಿಲುವಳಿ ಸೂಚನೆಯನ್ನು ತಳ್ಳಿಹಾಕಲಾಯಿತು. ಸೈನ್ ಹಾಕಿದರೆ ಏನೂ ಪ್ರಯೋಜನವಾಗುವುದಿಲ್ಲ. ಸುವೋ ಮೋಟೋ ನೋಡುವುದಕ್ಕೇ ಕ್ವಾಲಿಫಿಕೇಶನ್ ಇಲ್ಲವೆಂದು ಹೇಳಿ ತಳ್ಳಿಹಾಕಲಾಯಿತು. ಆದ್ದರಿಂದ, ಈಶ್ವರಪ್ಪನವರ ಕ್ಲೈಮೂ ಹೋಯಿತು ಅಲ್ಲಿಗೆ.

ಈಗ ಶ್ರೀನಿವಾಸಪುರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳು ಹೇಳುವುದಿದ್ದರೆ ಹೇಳಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಜಾಲಪ್ಪನವರು ಏನೋ ಮಾತನಾಡುವವರಿದ್ದಾರೆ.

+ ಶ್ರೀ ಆರ್.ಎಲ್. ಜಾಲಪ್ಪ : ರೈತರ ಹಸಿದ ಹೊಟ್ಟೆ ಮತ್ತು ಬಡತನ ಇದು ಹೆಚ್ಚಾದ ಹಾಗೆ ಕಾನೂನು, ರೂಲ್ಸ್ ಅವರಿಗೆ ಬೇಕಾಗುವುದಿಲ್ಲ. ಹಸಿದ ಹೊಟ್ಟೆ ಮತ್ತು ಬಡತನ ಕಾನೂನನ್ನು ಗೌರವಿಸಬೇಕು ಎನ್ನುವ ಸ್ಥಿತಿಗೆ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಆದರೆ, ಪವರ್ ಸಪ್ಲೈ ಇಲ್ಲ, ಊಟಕ್ಕೆ ಇಲ್ಲ, ಸಾಲ ಮಾಡಿಕೊಂಡಿದ್ದೇವೆ, ಪವರ್ ಸಪ್ಲೈ ಮಾಡಿದು ಹೇಳಿದರೆ ಅವರನ್ನು ಬೂಟ್ಸ್‌ನಲ್ಲಿ ಹೊಡೆಯುವುದಕ್ಕೆ ಶುರು ಮಾಡಿದರೆ ಎಷ್ಟು ದಿವಸ ಸರ್ಕಾರ ನಡೆಸುವುದಕ್ಕೆ ಸಾಧ್ಯವಾಗುತ್ತದೆಂದು ತಾವು ಯೋಚನೆ ಮಾಡಿ. ತಮಗೆ ನವಲಗುಂದ ಮತ್ತು ನರಗುಂದದಲ್ಲಿ ಏನಾಗಿತ್ತು ಎಂದು ಗೊತ್ತಿದೆ. ಆಗ ತಾವು ಬಹಳ ಜನ ಮಂತ್ರಿಗಳು ಆಗಿದ್ದಿರಿ. ಆದರೂ ಸರ್ಕಾರವನ್ನು ಉಳಿಸಿಕೊಳ್ಳುವುದಕ್ಕಾಗಲಿಲ್ಲ. ದಯವಿಟ್ಟು ನಿಮ್ಮಲ್ಲಿ ಏನು ಈ ಟೆಂಡೆನ್ಸಿ ಇದೆ ಅದನ್ನು ಬಿಟ್ಟುಬಿಟ್ಟು, ಏನು ಸಮಸ್ಯೆಗಳು ಇವೆ ಅದನ್ನು ಕೂಡಲೆ ಬಗೆಹರಿಸಲು ಅಲ್ಲಿಗೆ ಯಾರನ್ನಾದರೂ ಕಳುಹಿಸಿ ಅಥವಾ ತಾವೇ ಏನಾದರೂ ನೇರವಾಗಿ ಕ್ರಮ ತೆಗೆದುಕೊಳ್ಳಿ. ನನಗೆ ನಿಮ್ಮ ಬಗ್ಗೆ ಗೌರವ ಇದೆ. ನಾನು ಯಾವುದಕ್ಕೂ ನಿಮ್ಮ ಬಗ್ಗೆ ಅನಾವಶ್ಯಕವಾಗಿ ಮಾತನಾಡುವುದಿಲ್ಲ. ಈ ಚುನಾವಣೆಯಾದ ಮೇಲೆ ಈಚೆಗೆ ಪೋಲೀಸರ ಮೇಲೆ ಸರ್ಕಾರದ ಹತೋಟಿ ತಪ್ಪಿದೆ. ಇದಕ್ಕೆ ನೂರಾರು ಇನ್ಸ್ಟನ್ಸ್ ನನ್ನ ಹತ್ತಿರ ಇದೆ.

ಅದರೆ ಅವಿಶ್ವಾಸ ನಿರ್ಣಯದಲ್ಲಿ ಕೂಡಾ ನಾನು ಬಹಳಷ್ಟು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಡಿಮ್ಯಾಂಡ್ ಬಂದಾಗ ನಾನು ಮಾತನಾಡುತ್ತೇನೆ. ಒಂದೆರಡು ವಿಷಯಗಳನ್ನು ಮಾತ್ರ ನಾನು ಅಲ್ಲಿ ಸೂಚಿಸುತ್ತೇನೆ. ಚುನಾವಣೆಯಲ್ಲಿ ನೀವು ಅವರನ್ನು ದುರುಪಯೋಗ ಮಾಡಿಕೊಂಡಿರಿ. ಆವತ್ತಿನಿಂದ ಈಚೆಗೆ ಅವರಿಗೆ ಪೂರ್ಣವಾಗಿ ಸ್ವಾತಂತ್ರ್ಯವನ್ನು ಕೊಟ್ಟುಬಿಟ್ಟಿದ್ದೀರಿ. ಅದು ಇವತ್ತು ತೊಂದರೆಗೆಬಂದಿದೆ. ಅದು ಹದ್ದುಮೀರಿ ಹೋಗುತ್ತಿದೆ. ಒಳ್ಳೆಯತನ ಈ ಇಲಾಖೆಯಲ್ಲಿ ಆಗುವುದಿಲ್ಲ. ನಾನೇನು ಕಠಿಣವಾಗಿ ಇದ್ದು, ನಾನು ಏನೇನು ಅನುಭವಿಸಿದ್ದೇನೆ ಎನ್ನುವುದು ನನಗೆ ಗೊತ್ತಿದೆ. ಆದುದರಿಂದದ ದಯವಿಟ್ಟು ಎಷ್ಟು ದಿವಸ ಇರುತ್ತೀರೋ ಅಲ್ಲಿಯವರೆಗೂ ನೀವು ಈ ಇಲಾಖೆಯನ್ನು ಕಠಿಣವಾಗಿ ನಡೆಸಿ. ಇಲ್ಲದಿದ್ದರೆ ಅವರಿಗೆ ಮಾರಿಕೊಂಡು ಮನೆಗೆ ಹೋಗಿ. ಇಲ್ಲಿ ಗಲಾಟೆಗಳು ಆಗಿಯೇ ಆಗುತ್ತದೆ. ತೊಂದರೆಗಳು ಬರುತ್ತದೆ. ಬೆಟ್ಟದ ಮೇಲೆ ಮನೆಯನ್ನು ಕಟ್ಟಿಕೊಂಡು ಹುಲಿಗಳು ಬರುತ್ತವೆ ಎಂದು ಹೆದರಿದರೆ ಹೇಗೆ? ನೀವು ಅವರ ಮೇಲೆ ಹಿಡಿತವನ್ನು ಇಟ್ಟುಕೊಂಡು ಆಡಳಿತ ನಡೆಸುವುದಾದರೆ ಈ ರಾಜ್ಯದಲ್ಲಿ ಸುವ್ಯವಸ್ಥೆ ಕೊಡಬಹುದು. ಇಲ್ಲದಿದ್ದರೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಬೇರೆ ಯಾರಿಗಾದರೂ ಬಿಟ್ಟುಬಿಡಿ. ಇಲ್ಲದಿದ್ದರೆ ಅವರಿಗೆ ಮಾರಿಕೊಂಡು ಸುಮ್ಮನೆ ಅರಾಮವಾಗಿ ಕುಳಿತುಕೊಳ್ಳಿ.

+ ಶ್ರೀ ಧರ್ಮಸಿಂಗ್ (ಗೃಹ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ವಿರೋಧ ಪಕ್ಷದ ನಾಯಕರು, ಮತ್ತೆ ಯಡಿಯೂರಪ್ಪನವರು, ವಾಟಾಳ್ ನಾಗರಾಜ್ ರವರು, ಭೈರೇಗೌಡರು, ಜಾಲಪ್ಪನವರು ಸಿಂಧ್ಯಾರವರು ಈ ವಿಷಯದ ಬಗ್ಗೆ ಬಹಳ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಶ್ರೀನಿವಾಸಪುರದಲ್ಲಿ ಈ ಘಟನೆ ನಡೆದಿದೆ ಎನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ನಾನು ನೇರವಾಗಿ ಸಂಬಂಧಪಟ್ಟಂಥ ಪೋಲೀಸ್ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಕೂಡ ಮಾಡಿದ್ದೇನೆ. ನಿನ್ನೆ ಕೂಡ ಮಾನ್ಯ ನಾಣಯ್ಯನವರು ಮತ್ತು ಸುದರ್ಶನ್‌ರವರು ಮೇಲ್ಮನೆಯಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದರು. ಆಗಲೂ ಕೂಡ ನಾನು ಹೇಳಿದೆ, ಉತ್ತರ ಕೊಡುವುದಕ್ಕಿಂತ ಮುಂಚೆ ಅಲ್ಲಿ ಏನು ಘಟನೆ ನಡೆದಿದೆ, ಪ್ರಾಮಾಣಿಕವಾಗಿ ಅದರ ಬಗ್ಗೆ ಸರ್ಕಾರ ಪ್ರಯತ್ನವನ್ನು ಮಾಡುತ್ತದೆ ಮತ್ತು ಹಿರಿಯ ಅಧಿಕಾರಿಗಳನ್ನು ಆ ಸ್ಥಳಕ್ಕೆ ಕಳುಹಿಸಿಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಅದರಂತೆ ನಿನ್ನೆ ಕೂಡ ಡಿ.ಐ.ಬಿ. ಅವರನ್ನು ಕಳುಹಿಸಿಕೊಟ್ಟಿದ್ದೇನೆ. ಅವರಿಂದ ವರ್ತಮಾನ ಕೂಡ ಬಂದಿದೆ. ತಾವು ಹೇಳತಕ್ಕಂಥದ್ದರಲ್ಲಿ ತಪ್ಪಿದೆ ಎಂದು ನಾನು ಹೇಳುವುದಿಲ್ಲ. ತಾವು ಕೂಡಾ ವಿರೋಧ ಪಕ್ಷದ ನೇತಾರರುಗಳು ಇದ್ದೀರಿ, ಪ್ರತಿನಿಧಿಗಳು ಇದ್ದೀರಿ, ಮತ್ತು ಆ ಜಿಲ್ಲೆಯಿಂದ ಕೂಡಾ ಬಂದಿದ್ದೀರಿ. ಅಲ್ಲಿರತಕ್ಕಂಥ ವದಂತಿ ಕೂಡ ತಮಗೆ ಗೊತ್ತಿದೆ. ಅದರ ಬಗ್ಗೆ ನಾನು ಟೀಕೆಯನ್ನು ಮಾಡುತ್ತಿಲ್ಲ. ಆದರೆ ಪ್ರಜಾಪ್ರಭುತ್ವದಲ್ಲಿ ರೈತರಿಗೆ ಇರತಕ್ಕಂಥ ಸಮಸ್ಯೆಗಳ ಬಗ್ಗೆ ಅಭಿಪ್ರಾಯ ವ್ಯಕ್ತಮಾಡತಕ್ಕಂಥ ಹಕ್ಕು ಎಲ್ಲರಿಗೂ ಇದೆ. ಆದರೆ ಇದರಲ್ಲಿ ಕೂಡ ಒಂದು ನಿಯಮ ಇದೆ. ಅಲ್ಲಿ ಅವರು ಮೆರವಣಿಗೆ ಪ್ರವಾಸಿ ಮಂದಿರದಿಂದ ಹೊರಟು ತಹಶೀಲ್ದಾರ್ ಕಛೇರಿಗೆ ಹೋಗುವಾಗ ನಾವು ಎಲ್ಲಿಯೂ ಅವರನ್ನು ಅಡ್ಡಿಪಡಿಸಿಲ್ಲ. ಘೋಷಣೆಗಳನ್ನು ಕೂಗಿಕೊಂಡು ಸಮಸ್ಯೆಗಳನ್ನು ತಹಶೀಲ್ದಾರ್ ಕಛೇರಿಗೆ ಹೇಳುವುದಕ್ಕೆ ಹೊರಟಾಗ ನಾವು ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದೇವೆ. ಯಾರಿಗೂ ಕೂಡ ತೊಂದರೆಯನ್ನು ಮಾಡಿಲ್ಲ. ನಾನು ಇಲ್ಲಿ ಎರಡು ಭಾಗವನ್ನೂ ಹೇಳುತ್ತಿದ್ದೇನೆ.

ಶ್ರೀ ಎಂ.ವಿ. ವೆಂಕಟಪ್ಪ : ಮೊದಲು ಕೆ.ಇ.ಬಿ.ಗೆ ಹೋಗಿದ್ದು, ಆಮೇಲೆ ತಹಶೀಲ್ದಾರ್ ಕಛೇರಿಗೆ ಹೋಗಿದ್ದುದು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ಆ ಪೋಲೀಸ್ ಅಧಿಕಾರಿಗಳನ್ನು ಮನೆಗೆ ಕಳುಹಿಸಿದ್ದೀರಾ? ಅವರನ್ನು ಸಸ್ಪೆಂಡ್ ಮಾಡಿದ್ದೀರಾ? ರೈತರನ್ನು ಬೂಟ್ಸ್‌ನಲ್ಲಿ ಹೊಡೆದಿದ್ದಾರೆ, ಮುಖಂಡರುಗಳ ಮೇಲೆ ಹಲ್ಲೆಯನ್ನು ಮಾಡಿದ್ದಾರೆ. ಅವರ ಬಗ್ಗೆ ಏನು ತೀರ್ಮಾನವನ್ನು ತೆಗೆದುಕೊಂಡಿದ್ದೀರಿ, ಅವರುಗಳ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ನಿಮ್ಮ ಉತ್ತರವನ್ನು ಕೇಳಿಕೊಂಡು, ನಾವು ಕೈಕಟ್ಟಿಕೊಂಡು ಕುಳಿತುಕೊಳ್ಳಬೇಕೇ? 24 ಗಂಟೆಗಳೊಳಗಾಗಿ ಆ ಅಧಿಕಾರಿಗಳನ್ನು ತಾವು ಮನೆಗೆ ಕಳುಹಿಸಬೇಕಾಗಿತ್ತು. ಇದು ಒಂದು ರೈತ ವಿರೋಧ ಸರ್ಕಾರ. ನಾವು ಸಭಾತ್ಯಾಗ ಮಾಡಿ ಹೊರಗಡೆ ಹೋಗಬೇಕಾಗುತ್ತದೆ. ಆ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ.

(ಗೊಂದಲ)

ಶ್ರೀ ಧರ್ಮಸಿಂಗ್ : ಅವರು ನನಗೂ ಅವಕಾಶವನ್ನು ಕೊಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬನ್ನಿರಿ ಹೋಗೋಣ.

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಕನ್ನಡ ಪಕ್ಷ ಮತ್ತು ಸಮಾಜವಾದಿ ಜನತಾ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

(ಗೊಂದಲ)

(ಮತ್ತೊಂದು ಹಂತದಲ್ಲಿ ಸಮಾಜವಾದಿ ಜನತಾ ಪಕ್ಷದ ಸದಸ್ಯರಾದ ಬೈರೇಗೌಡರು ತಮ್ಮ ಜಾಗದಲ್ಲಿ ಬಂದು ಕುಳಿತುಕೊಂಡರು)

(ಗೊಂದಲ)

ಅಧ್ಯಕ್ಷರು : ದಯಾನಂದರಾಯರೇ, ನೀವು ಆಸನಾರೂಢರಾಗಿ ನನಗೆ ಬಹಳ ಸಮಾಧಾನ ತರತಕ್ಕಂಥ ವಿಚಾರ ಏನೆಂದರೆ ಪ್ರಜಾಸತ್ತೆಯಲ್ಲಿ ನೀವು ಹೇಳಿದ್ದಕ್ಕೆಲ್ಲ ಅವಕಾಶವನ್ನು ಕೊಟ್ಟೆ. ಮಾನ್ಯ ಯಡಿಯೂರಪ್ಪನವರಿಗೂ ಅವಕಾಶವನ್ನು ಕೊಟ್ಟೆ. ಶ್ರೀ ವಾಟಾಳ್ ನಾಗರಾಜ್‌ರವರಿಗೂ ಅವಕಾಶವನ್ನು ಕೊಟ್ಟೆ. ಅವರು ಹೇಳಿದ್ದನ್ನು ಹೇಳಿದ ಮೇಲೆ ಮಂತ್ರಿಗಳು ಏನು ಹೇಳುತ್ತಿದ್ದಾರೆ ಎನ್ನತಕ್ಕಂಥದ್ದನ್ನು ಕೇಳತಕ್ಕಂಥ ಕನಿಷ್ಠ ಸೌಜನ್ಯವನ್ನು ತೋರಿಸತಕ್ಕಂಥದ್ದು ಪ್ರಜಾಪ್ರಭುತ್ವದ ಸಂಪ್ರದಾಯ. ಅದಕ್ಕೆ ಮಾನ್ಯ ಬೈರೇಗೌಡರು ಹೋಗಿದ್ದವರು ಹಿಂದೆ ಬಂದಿದ್ದು ಬಹಳ ಸಂತೋಷವಾಯಿತು. I compliment you on that.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಅಲ್ಲಿಗೆ ಹೋಗಿ ವಾಪಸ್ ಬಂದುದು ಏತಕ್ಕೆಂದರೆ, ಸಭೆಯಿಂದ ಹೊರಗಡೆ ಹೋಗಬೇಕೆನ್ನುವುದಕ್ಕೋಸ್ಕರವಾಗಿ ಅಲ್ಲ. ಮಾನ್ಯ ಗೃಹಸಚಿವರು ಹೇಳಿದ್ದನ್ನು ಮೊದಲು ನಾವು ಕೇಳೋಣ ಎನ್ನುವ ಮಾತನ್ನು ಅವರಿಗೆ ಹೇಳಿ ಬಂದಿದ್ದೇನೆ. ಸಚಿವರು ಹೇಳುವುದನ್ನು ಶಾಂತ ರೀತಿಯಿಂದ ನಾವೆಲ್ಲರೂ ಕೇಳೋಣ ಎನ್ನುವುದು ನನ್ನ ಅಭಿಪ್ರಾಯ ಅಷ್ಟೆ...

(ಗೊಂದಲ)

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ನಿನ್ನೆ ವಿಧಾನ ಪರಿಷತ್ತಿನಲ್ಲಿ ಮಾನ್ಯ ನಾಣಯ್ಯನವರು ಮತ್ತು ಸುದರ್ಶನ್‌ರವರು ಈ ಪ್ರಶ್ನೆಯನ್ನು ಎತ್ತಿದಾಗ ಏನು ವರದಿ ಬಂದಿದೆ ಅದರ ಪ್ರಕಾರ ಅವರಿಗೆ ನಾನು ಉತ್ತರವನ್ನು ಹೇಳಬಹುದಾಗಿತ್ತು. ಆದರೆ ಅಲ್ಲಿ ಏನು ನಡೆದಿದೆ ಎಂಬ ಬಗ್ಗೆ ನಿಜವಾದ ಸಂಗತಿ ನನಗೆ ಬಂದ ಮೇಲೆ ಅದನ್ನು ಈ ಸದನಕ್ಕೆ ಕೊಡಬೇಕು ಎಂಬ ಉದ್ದೇಶದಿಂದ ನಿನ್ನೆ ಡಿಐಜಿಯವರನ್ನು ಅಲ್ಲಿಗೆ ಕಳುಹಿಸಿಕೊಟ್ಟಿದ್ದೇನೆ. ಅವರು ಅಲ್ಲಿಗೆ ಹೋಗಿ ಖುದ್ದಾಗಿ ಅಲ್ಲಿನ ಮುಖಂಡರುಗಳನ್ನು ಭೇಟಿ ಮಾಡಿ ಮಾತನಾಡಿದ್ದಾರೆ, ಅಂತೆಯೇ ಗಾಯಾಳುಗಳು ಇರುವ ಆಸ್ಪತ್ರೆಗೆ ಕೂಡ ಹೋಗಿ ಅವರನ್ನು ಕಂಡು ಮಾತನಾಡಿ ಬಂದಿದ್ದಾರೆ. ಒಟ್ಟಾರೆ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂಬುದನ್ನು ಡಿಐಜಿಯವರು ನನಗೆ ಬಂದು ವಿವರಿಸಿದ್ದಾರೆ. ಹಿಂದೆ ನಾನು ಈ ಗಲಾಟೆ ಎಲ್ಲಿಂದ ಪ್ರಾರಂಭವಾಯಿತು ಎಂಬ ಮಾತನ್ನು ಹೇಳಿದ್ದೇನೆಯೇ ಹೊರತಾಗಿ ಬೇರೆ ಏನೂ ಇಲ್ಲ. ಹಿಂದೆ ತಾವುಗಳು ಕೂಡ ಸರಕಾರದಲ್ಲಿ ಮಂತ್ರಿಯಾಗಿ ಕೆಲಸ ಮಾಡಿದ್ದವರು. ಮಾನ್ಯ ಬೈರೇಗೌಡರು ಮತ್ತಿತರು ಕೂಡ ಮಂತ್ರಿಯಾಗಿ ಕೆಲಸ ನಿರ್ವಹಣೆ ಮಾಡಿದ್ದವರು. ತಾವುಗಳು ಆ ಒಂದು ಅನುಭವದ ಆಧಾರದ ಮೇಲೆ ಮಾತನಾಡಿದ್ದೀರಿ. ಇವೊತ್ತಿನ ದಿವಸ ಅಲ್ಲಿ ಏನಾಗಿದೆ ಏನು ದೌರ್ಜನ್ಯ ನಡೆದಿದೆ, ಎಲ್ಲಿ ಲಾಠಿಯಲ್ಲಿ ಹೊಡೆದಿದ್ದಾರೆ, ಅದರಿಂದಾಗಿ 30 ಜನರು ಏನು ಆಸ್ಪತ್ರೆಯಲ್ಲಿದ್ದಾರೆ ಮತ್ತು ಇನ್ನೂ ಬೇರೆ ಬೇರೆ ರೀತಿಯಲ್ಲಿ ಅಲ್ಲಿ ತೊಂದರೆಯಾಗಿದೆ ಎಂಬುದನ್ನು ತಾವುಗಳು ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆ ಸರಕಾರ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ. ಏಕೆಂದರೆ, ಪ್ರಜಾಪ್ರಭುತ್ವದಲ್ಲಿ ಎಲ್ಲಾ ಕಡೆಗಳಲ್ಲಿ ರೈತರ ಸಮಸ್ಯೆಗಳ ಬಗ್ಗೆ ಪ್ರತಿನಿಧಿತ್ವ ಮಾಡತಕ್ಕಂಥ ಹಕ್ಕು ತಮ್ಮೆಲ್ಲರಿಗೂ ಇದೆ. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿರಬಹುದು. ಹಿಂದೆ ಕರ್ನಾಟಕ ರಾಜ್ಯದಲ್ಲಿ ರೈತರು ಚಳುವಳಿ ಮಾಡಿದ ಮೇಲೆ, ರೈತರುಗಳ ಮೇಲಿದ್ದ ಮೊಕದ್ದಮೆಗಳನ್ನು ಪ್ರಪ್ರಥಮವಾಗಿ ಕರ್ನಾಟಕ ಸರಕಾರದ ವತಿಯಿಂದ ಹಿಂದಕ್ಕೆ ತೆಗೆದುಕೊಂಡಿದ್ದೇವೆ. ರೈತರ ಬಗ್ಗೆ ಕೇಸ್ ಹಾಕಬೇಕು, ಅವರಿಗೆ ಹಿಂಸೆ ಕೊಡಬೇಕೆಂಬುದು ಸರಕಾರದ ಕ್ರಮ ಅಲ್ಲ. ಎಲ್ಲೆಲ್ಲಿ ದೌರ್ಜನ್ಯಗಳು ಆಗಿವೆ ಅಲ್ಲಿ ಸೂಕ್ತ ಕ್ರಮಗಳನ್ನು

ತೆಗೆದುಕೊಳ್ಳುತ್ತೇವೆ. ಹಾಗೆಯೇ ಅಲ್ಲಿ ಏನಾಗಿದೆ ಎನ್ನತಕ್ಕಂಥಾದ್ದನ್ನು ನೋಡಲು ನಿಷ್ಪಕ್ಷಪಾತವಾದಂಥ ಒಂದು ವರದಿ ಬರಲಿಕ್ಕೆ ಮೆಜಿಸ್ಟೀರಿಯಲ್ ತನಿಖೆಯನ್ನು ಮಾಡಿಸುತ್ತೇನೆ. ಅವರಿಂದ ವರದಿ ಬಂದ ಮೇಲೆ ಅದರಲ್ಲಿ ಯಾರ್ಯಾರು ಒಳಗಾಗಿದ್ದಾರೆ, ಅದನ್ನು ನೋಡಿ ಅಂಥವರ ಮೇಲೆ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬೂಟ್‌ನಲ್ಲಿ ಹೊಡೆಸುವುದು ಸರಿಯೇ? ಇದರ ಬಗ್ಗೆ ಅವರು ಏನಾದರೂ ಹೇಳಿದ್ದಾರೋ? ಅದನ್ನು ಹೇಳುವುದನ್ನು ಬಿಟ್ಟು ವರದಿ ತರಿಸುತ್ತೇವೆ ಎಂದರೆ ಯಾವಾಗ ತರಿಸುತ್ತೀರಿ? ಅಲ್ಲಿನ ಪರಿಸ್ಥಿತಿ ಯಾವ ಸ್ಥಿತಿಗೆ ಹೋಗಿದೆ ಅಂದರೆ I am sorry that the Hon. Home Minister has not realised the magnitude of the problem. ಅದು ಅಲ್ಲಿಗೆ ಹೋಗಬಹುದು, ಯಾವ ಸ್ಥಿತಿಗೆ ಹೋಗಬಹುದು, ಎಷ್ಟು ಜನರಿಗೆ ಪ್ರಾಕ್ಚರ್ ಆಗಿದೆ, ಎಷ್ಟು ಜನರು ಆಸ್ಪತ್ರೆಯಲ್ಲಿ ಇದ್ದಾರೆ, ಅದನ್ನು ಹೇಳಿ ಸಂಬಂಧಪಟ್ಟ ವಿವರಗಳನ್ನು ಕೊಡಿ.

ಶ್ರೀ ಧರ್ಮಸಿಂಗ್ : ಆಯಿತು, ಕೊಡುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಸಭಾಧ್ಯಕ್ಷರೇ, ಇಡೀ ಚರ್ಚೆಯನ್ನು ಕೇಳುತ್ತಾ ನಾನು ಮೌನವಾಗಿ ಕುಳಿತಿದ್ದೇನೆ. ಕಾರಣ ನನಗೆ ಸಿಟ್ಟು ಬಹಳ ಜಾಸ್ತಿಯಾಗಿತ್ತು. ಇಲ್ಲಿ ಮುಖ್ಯವಾದ ವಿಷಯ ಇರುವುದು ಏನೆಂದರೆ, ಪೋಲೀಸರಿಗೂ ಮತ್ತು ಜನರಿಗೂ ಯಾವ ರೀತಿಯಾದಂಥ ಸಂಬಂಧ ಇರಬೇಕು? ಅದು ಇಲ್ಲದಿದ್ದರೆ ಅದರ ಪರಿಣಾಮ ಏನಾಗುತ್ತದೆ ಎಂಬುದು. ರೈತರುಗಳ ಮೇಲೆ ಮೊಕದ್ದಮೆಗಳನ್ನು ಹಾಕುವ ಇಚ್ಛೆ ಈ ಸರಕಾರಕ್ಕೆ ಇಲ್ಲ, ಹಿಂದೆ ರೈತರು ಚಳುವಳಿ ಮಾಡಿದಾಗ ಹಾಕಿದ ಮೊಕದ್ದಮೆಗಳನ್ನು ವಾಪಸ್ ತೆಗೆದುಕೊಳ್ಳುವ ತೀರ್ಮಾನ ಮಾಡಿದ್ದೇವೆ ಎಂದು ಮಾನ್ಯ ಗೃಹಸಚಿವರು ಹೇಳುವುದು, ತಮ್ಮ ಪಕ್ಷದ ಸದಸ್ಯರುಗಳು ಮೇಜು ಕುಟ್ಟುವುದು-ಇತ್ಯಾದಿಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಪೋಲೀಸರಿಗೂ ಜನರಿಗೂ ಯಾವ ರೀತಿಯಾದಂಥ ಗಂಭೀರವಾದಂಥ ಸಂಬಂಧ ಇರಬೇಕು, ಮರ್ಯಾದೆಯುತವಾದ ಸಂಬಂಧ ಇರಬೇಕು ಎನ್ನುವುದನ್ನು ಇನ್ನಾದರೂ ನೀವು ತಿದ್ದುಪಡಿ ಮಾಡದಿದ್ದರೆ ಕಳೆದ ತಿಂಗಳು ಉತ್ತರ ಪ್ರದೇಶದಲ್ಲಿ ರೈತರಿಗೂ ಪೋಲೀಸರಿಗೂ ಆದಂಥ ಚಕಮಕಿಯ ಉದಾಹರಣೆಯನ್ನು ಇಲ್ಲಿ ಹೇಳಬೇಕಾಗುತ್ತದೆ. ಕಳೆದ ತಿಂಗಳು ಅಲ್ಲಿಯೂ ಗಾಂಭೀರ್ಯದ ಗೆರೆಯನ್ನು ಪೋಲೀಸರು ದಾಟಿದ್ದರು. ಅಲ್ಲಿನ ರೈತರು ಪೋಲೀಸರ ಮೇಲೆ ಗುಂಡು ಹಾರಿಸಿದರು. ಪೋಲೀಸರ ಶವವನ್ನು ಒಂದು ವಾರವಾದರೂ ಕೂಡ ರೈತರು ವಾಪಸ್ ಕೊಡಲಿಲ್ಲ. ಅನಂತರ ಕಲ್ಯಾಣಸಿಂಗ್ ರವರು ಹೋಗಿ ರೈತರ ಕಾಲಿಗೆ ಬಿದ್ದ ಮೇಲೆ ಶವವನ್ನು ವಾಪಾಸ್ ಕೊಟ್ಟರು. ಆ ಒಂದು ಮಟ್ಟಕ್ಕೆ ನಮ್ಮನ್ನೂ ತೆಗೆದುಕೊಂಡು ಹೋಗುವುದಕ್ಕೆ ನೀವುಗಳು ಇಚ್ಛೆಪಡುತ್ತೀರಾ ಎಂದು ಕೇಳಬಯಸುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ನಂಜುಂಡಸ್ವಾಮಿಯವರು ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಪೋಲೀಸರು ಮತ್ತು ಸಾಮಾನ್ಯ ಜನರ ಸಂಬಂಧ ಚೆನ್ನಾಗಿರಬೇಕಾಗುತ್ತದೆ. ಇದರ ಬಗ್ಗೆ ಈಗಾಗಲೇ ಪೋಲೀಸ್ ಇಲಾಖೆಗೆ ಆದೇಶ ಕೊಟ್ಟು ಸಾರ್ವಜನಿಕರೊಂದಿಗೆ ಸಂಪರ್ಕ ಹೇಗಿರಬೇಕೆಂದು ತಿಳಿಸಿದ್ದೇವೆ. ಹಾಗಿಲ್ಲದೆ ಹೋದರೆ ಹೀಗೆಲ್ಲ ಅನಾಹುತಗಳಾಗುತ್ತವೆಂಬುದನ್ನು ನಾನು ಒಪ್ಪುತ್ತೇನೆ. ವಿರೋಧ ಪಕ್ಷದ ನಾಯಕರು ಹೇಳಿದಂತೆ 30 ಜನರಿಗೆ ಪೆಟ್ಟಾಗಿದೆ, ಅವರು ಆಸ್ಪತ್ರೆಯಲ್ಲಿದ್ದು ಬಹಳ ಸೀರಿಯಸ್ ಏನೂ ಆಗಿಲ್ಲ, ಸ್ವಲ್ಪ ಇಂಜುರೀಸಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಪೋಲೀಸ್ ಅಧಿಕಾರಿಗಳು ಹೋಗಿದ್ದಾರೆ. ಅಲ್ಲಿ ಘಟನೆ ಏನಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದಲ್ಲ. ಇವತ್ತು ಸರ್ಕಾರ ಕಣ್ಣುಮುಚ್ಚಿ ಕುಳಿತಿಲ್ಲ, ಸಂಬಂಧಪಟ್ಟ ಹಿರಿಯ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಎಲ್ಲಿ ಲೋಯರ್ ಲೆವೆಲ್‌ನಲ್ಲಿ ಈ ರೀತಿಯಾಗಿದೆ ಅಲ್ಲಿ, ಕ್ರಮ

ತೆಗೆದುಕೊಳ್ಳುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇನೆ. ಅದು ಕೂಡ ಆಗುತ್ತಿದೆ. ಮಾನ್ಯ ಸಿಂಧ್ಯಾ ಅವರು ಫೈಯರ್ ಆಫೀಸರ್‌ನ್ನು ಕಳಿಸಿದರೆ "they will protect your Police Department" ಎಂದು ಹೇಳಿದರು. ಅದಕ್ಕೋಸ್ಕರ ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಮಾಡಿಸುತ್ತೇವೆ. ಆಮೇಲೆ ಜಾಲಪ್ಪನವರು ಚುನಾವಣೆ ಆದ ಮೇಲೆ ಪೋಲೀಸರು ತಮ್ಮ ಕೈ ತಪ್ಪಿ ಹೋಗಿದ್ದಾರೆಂದು ಹೇಳಿದ್ದಾರೆ. ಅವರು ಕೂಡ ಈ ಖಾತೆಯನ್ನು ನಿರ್ವಹಿಸಿದ್ದಾರೆ. ಅವರಿಗೆ ಗೊತ್ತಿರಬಹುದು, ಹೋದ ಚುನಾವಣೆಯಲ್ಲಿ ದೇಶದಲ್ಲಿ ಯಾವ ವಿಷಮ ಪರಿಸ್ಥಿತಿ ಇತ್ತು ಎಂದು ಗೊತ್ತಿರಬಹುದು. ಆದರೆ ಕರ್ನಾಟಕದಲ್ಲಿ ಯಾವುದೇ ಅಹಿತಕರ ಘಟನೆ ಆಗಲು ಪೋಲೀಸ್ ಇಲಾಖೆಯವರು ಅವಕಾಶ ಕೊಡಲಿಲ್ಲ, ಅಷ್ಟು ವಿಚಕ್ಷಣೆಯಿಂದ ಚುನಾವಣೆಯಲ್ಲಿ ಅವರು ಕೆಲಸ ಮಾಡಿದ್ದಾರೆ. ಕರ್ನಾಟಕದಲ್ಲಿ ಪೋಲೀಸ್ ಇಲಾಖೆ ಸರ್ಕಾರದ ಹತೋಟಿಯಲ್ಲಿದೆ. ಕೆಲಸ ಕಾರ್ಯಗಳು ನಡೆಯುತ್ತಿವೆ.

ಶ್ರೀ ಆರ್.ಎಲ್. ಜಾಲಪ್ಪ : ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಿ ಸ್ವಾಮಿ, ಪೋಲೀಸರಿಗೆ ಕಿರೀಟ ಇಡಲು ಇಲ್ಲಿ ಹೋಗಬೇಡಿ. ಅನುಭವಿಸಿರುವವರು ನಾವಿಲ್ಲಿದ್ದೇವೆ. ಅದನ್ನೆಲ್ಲಾ ಸಮಯ ಬಂದಾಗ ಹೇಳುತ್ತೇನೆ. ನಮ್ಮ ಅದೃಷ್ಟ. ನಾವು ಪ್ರಾಣ ಉಳಿಸಿಕೊಂಡು ಬಂದಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಶ್ರೀನಿವಾಸಪುರದಲ್ಲಿ ನಡೆದ ಘಟನೆ ಇವತ್ತು ನಿನ್ನೆಯದಲ್ಲ. ಚುನಾವಣೆಗೆ ಮುನ್ನ ಸರ್ಕಾರದ ನೇತೃತ್ವದಲ್ಲಿ ನಡೆದ ಮತೀಯ ಗಲಭೆಗಳಲ್ಲಿ 450 ಎಕರೆ ಮಾವಿನ ತೋಟವನ್ನು ಕತ್ತರಿಸಿಹಾಕಿದರು ಅದನ್ನು ಏಕೆ ಹೇಳುತ್ತಿಲ್ಲ.

ಶ್ರೀ ಧರ್ಮಸಿಂಗ್ : ಶ್ರೀನಿವಾಸಪುರದಲ್ಲಿ 1984ರಲ್ಲಿ ಕೂಡ ಈ ರೀತಿ ನಡೆದಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ಆದರೆ ನಿನ್ನೆ ಅಲ್ಲಿ ನಡೆದಿರುವ ಘಟನೆ ಬಗ್ಗೆ ನಿನ್ನೆ ನಾವು ಪ್ರಸ್ತಾಪ ಮಾಡಲಿಲ್ಲ. ಕಾರಣವೇನೆಂದರೆ ನಾವು ಮಾಹಿತಿ ತಿಳಿದುಕೊಳ್ಳೋಣ ಎಂದು. ಇವತ್ತು ಬೆಳಿಗ್ಗೆ ಅಲ್ಲಿಂದ ಬಂದವರು ಹೇಳುತ್ತಾರೆ, ಅಲ್ಲೊಂದು ರೀತಿಯ ಎಮರ್ಜೆನ್ಸಿ ಇದೆಯೇನೋ ಅಲ್ಲಿ ಯಾರೂ ಓಡಾಡಬಾರದೇನೋ ಎನ್ನುವಂಥ ಪರಿಸ್ಥಿತಿ ಇದೆಯೆಂದು. ಇದರಲ್ಲಿ ರಾಜಕಾರಣಿಗಳಿಗೂ ಅಧಿಕಾರಿಗಳಿಗೂ ನೇರವಾದ ಸಕ್ಸಸ್ ಇದೆ. ವಿಶೇಷವಾಗಿ ನಿಮ್ಮ ಪಕ್ಷದ ರಾಜಕಾರಣಿಗಳು ಅಧಿಕಾರಿಗಳನ್ನು ನಿಯಂತ್ರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಜ್ಯುಡಿಶಿಯಲ್ ಎನ್‌ಕ್ವಯರಿ ಮಾಡಿಸುತ್ತೀರೋ ಇಲ್ಲವೋ ಹೇಳಿ. ಜುಡಿಶಿಯಲ್ ಎನ್‌ಕ್ವಯರಿ ಮಾಡುತ್ತೇವೆಂದು ಅನೌನ್ಸ್ ಮಾಡಿ ಘಟನೆ ಏನೇನು ಆಗಿದೆಯೋ ಅದೆಲ್ಲ ಹೊರಗೆ ಬರಲಿ.

ಶ್ರೀ ಧರ್ಮಸಿಂಗ್ : ಮ್ಯಾಜಿಸ್ಟಿರಿಯಲ್ ಎನ್‌ಕ್ವಯರಿ ಮಾಡಿಸುತ್ತೇನೆಂದು ಹೇಳಿದ್ದೇನಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಜ್ಯುಡಿಶಿಯಲ್ ಎನ್‌ಕ್ವಯರಿ ಮಾಡಬೇಕು. ಲಾಠಿ ಚಾರ್ಜ್ ಹೆಸರಲ್ಲಿ ರೈತರ ಕೈಕಾಲು ಮುರಿದಿದ್ದಾರೆ, ಬೆನ್ನು ಮೂಳೆ ಮುರಿದಿದ್ದಾರೆ. ಇವತ್ತೇ ಹೋಗೋಣ. ನೀವೂ ಬನ್ನಿ, ನಾವೂ ಬರುತ್ತೇವೆ. ಸತ್ಯವನ್ನು ತಿಳಿದುಕೊಂಡು ಬರೋಣ.

SRI DHARMASINGH : We will take action.

SRI D.B. CHANDRE GOWDA : Let us go right now. I demand that let us go right now. I am prepared to accompany him.

SRI DHARMASINGH : Just a minute. ಈಗಾಗಲೇ ಇದರ ಬಗ್ಗೆ ಪರಿಶೀಲನೆ ನಡೆಸಲು ಡಿಐಜಿ ಕೂಡ ಹೋಗಿದ್ದಾರೆ, ಬೇರೆ ಸಂಬಂಧಿಸಿದ ಅಧಿಕಾರಿಗಳೂ ಹೋಗಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರ ನಡೆಸಿದ ವರ್ಗಾವಣೆ ಕಾರಣದಿಂದ ಅಧಿಕಾರಿಗಳ ಮೇಲೆ ನೈತಿಕ ಹತೋಟಿ ಇಲ್ಲವಾಗಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಗೃಹಸಚಿವರು ತಮ್ಮ ಬಳಿ ಮಾಹಿತಿ ಇದೆ, ವರದಿ ಬಂದಿದೆ ಎಂದು ಹೇಳಿದ್ದಾರೆ. ಯಾವ ಮಾಹಿತಿ ಇದೆಯೋ ನನಗೆ ಗೊತ್ತಿಲ್ಲ. 30 ಜನಗಳಿಗೆ ಒದೆಗಳು ಬಿದ್ದಿವೆ ಗಾಯಗಳಾಗಿವೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಅದರ ಬಗ್ಗೆ ಅವರ ಹತ್ತಿರ ಮಾಹಿತಿ ಇದೆ. ಆದರೆ ಇವತ್ತಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ರೈತರನ್ನು ಬೂಟುಗಾಲಲ್ಲಿ ಒದೆಯತಕ್ಕಂಥ ಹೀನಾಯವಾದಂಥ ಕೃತ್ಯ ನಡೆದಿದ್ದರೂ ಏನು ಕ್ರಮ ಜರುಗಿಸಿಲ್ಲ. ಈಗ ಕಣ್ಣೊರೆಸುವ ಕೆಲಸ ನಡೆಯುತ್ತಿದೆ. ನಿನ್ನೆ ಅವರು ತಹಶೀಲ್ದಾರ್‌ರಿಂದ ದೂರು ತೆಗೆದುಕೊಂಡಿದ್ದಾರೆ.

ನನ್ನನ್ನು ಅಟೆಮ್ಟ್ ಮರ್ಡರ್ ಮಾಡುವುದಕ್ಕೆ ಬಂದಿದ್ದರು ಎನ್ನತಕ್ಕಂಥ ದೂರನ್ನು ತಹಶೀಲ್ದಾರ್‌ರವರಿಂದ ತೆಗೆದುಕೊಂಡ ಮೇಲೆ ಇವರನ್ನು ತೆಗೆದುಕೊಂಡು ಹೋಗಿ ಪೋಲೀಸ್ ಸ್ಟೇಷನ್‌ನಲ್ಲಿ ಬಟ್ಟೆ ಬಿಚ್ಚಿಸಿ, ಬೂಟು ಕಾಲಿನಿಂದ ಒದ್ದಿರತಕ್ಕಂಥಾದ್ದು, ಅಲ್ಲಿ ಮುರಿದಿರತಕ್ಕಂಥಾದ್ದು ನಾಲ್ಕು ಕುರ್ಚಿಗಳು ಅಷ್ಟೆ. ಇನ್ನೇನೂ ಮಹಾ ಅನಾಹುತ ಆಗಿಲ್ಲ. ತಾವು ಕೂಡ ರೈತರು, ದಯವಿಟ್ಟು ಕೇಳಬೇಕು. ಕಷ್ಟಪಟ್ಟು ಬೆಳೆಸಿರತಕ್ಕಂಥ ಬೆಳೆ ಒಣಗುತ್ತಿದ್ದರೆ, ನೀರು ಇಲ್ಲದೆ ಬೆಳೆ ಒಣಗುತ್ತಿದ್ದರೆ ಯಾವ ರೈತನೂ ಕೂಡ ಸುಮ್ಮನೆ ಕುಳಿತಿರುವುದಿಲ್ಲ. ಸುಮ್ಮನೆ ಕುಳಿತರೆ ಅವನು ರೈತನಾಗುವುದಕ್ಕೆ ಅರ್ಹನಲ್ಲ. ಏನು ಸಿಗುತ್ತದೋ, ಅದನ್ನು ಕೈಗೆ ತೆಗೆದುಕೊಳ್ಳಬೇಕಾಗುತ್ತದೆ. ಆಗ ತಹಶೀಲ್ದಾರ್ ಕಛೇರಿಯನ್ನು ನೋಡುವುದಕ್ಕಾಗುವುದಿಲ್ಲ, ಯಾರನ್ನೂ ನೋಡುವುದಕ್ಕಾಗುವುದಿಲ್ಲ. ಬೆಳೆ ಒಣಗುತ್ತಿದ್ದರೆ ಹೊಟ್ಟೆ ಉರಿಯುತ್ತದೆ. ತಾನೇ ಬೆಂಕಿ ಇಟ್ಟುಕೊಂಡು ಸುಟ್ಟುಕೊಳ್ಳತಕ್ಕಂಥ ಪರಿಸ್ಥಿತಿಗೆ ಹೋಗಬೇಕಾಗುತ್ತದೆ. ಅಷ್ಟೊಂದು ಸಿಟ್ಟು, ಅಷ್ಟೊಂದು ಕೋಪ ಬರುತ್ತದೆ ನಿಜವಾದ ರೈತನಿಗೆ. ಅಲ್ಲಿ ನಾಲ್ಕು ಕುರ್ಚಿಗಳು ಮುರಿದಿರಬಹುದು. ಅಷ್ಟೊಂದು ದೊಡ್ಡ ಅನಾಹುತವೇನೂ ಆಗಿಲ್ಲ. ಅಷ್ಟಕ್ಕೆ ಇಷ್ಟು ಜನ ರೈತರನ್ನು ಬೂಟು ಕಾಲಿನಲ್ಲಿ ಒದ್ದು 30 ಜನರನ್ನು ಆಸ್ಪತ್ರೆಗೆ ಕಳುಹಿಸಿದ್ದರೂ ಕೂಡ, ಅದರ ಮಾಹಿತಿ ತಮ್ಮ ಹತ್ತಿರ ಇದ್ದರೂ ಕೂಡಾ ಇಲ್ಲಿಯವರೆಗೆ ತಾವು ಏನೂ ಮಾಡಿಲ್ಲ.

ಅಧ್ಯಕ್ಷರು : ಮ್ಯಾಜಿಸ್ಟಿರಿಯಲ್ ಎನ್‌ಕ್ವಯರಿಯನ್ನು ಮಾಡುತ್ತೇನೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ.ಬೈರೇಗೌಡ : ಕಣ್ಣೊರೆಸತಕ್ಕಂಥ ಕೆಲಸ ನಡೆಯುತ್ತಿದೆ.

(ಗೊಂದಲ)

ಶ್ರೀ ಬಿ.ಹೆಚ್. ಬನ್ನಿಕೋಡ್ : ಘಟನೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಇವರು ಜುಡಿಷಿಯಲ್ ಎನ್‌ಕ್ವಯರಿಯನ್ನು ಕೂಡಾ ಮಾಡುವುದಕ್ಕೆ ತಯಾರಾಗಿಲ್ಲ ವಿದ್ಯುಚ್ಛಕ್ತಿ ಕೊಡುವುದಕ್ಕೂ ಕೂಡಾ ತಯಾರಾಗಿಲ್ಲ. ತಹಶೀಲ್ದಾರ್‌ರವರಿಂದ ರೈತರ ವಿರುದ್ಧ ಬರೆಸಿಕೊಂಡಿದ್ದಾರೆ.

ಕೊಲೆ ಮಾಡುವುದಕ್ಕೆ ಬಂದಿದ್ದರು ಎಂದು ತಹಶೀಲ್ದಾರ್‌ರವರಿಂದ ಬರೆಸಿಕೊಂಡಿದ್ದಾರೆ. ಈ ರೀತಿಯಾದರೆ ಈ ರೈತರುಗಳ ರಕ್ಷಣೆ ಹೇಗೆ? ನಾನು ಇಂಥ ಪ್ರವೃತ್ತಿಯನ್ನು

ಸಹಿಸಿಕೊಂಡು ಈ ಸದನದಲ್ಲಿ ಇರುವುದಕ್ಕೆ ಆಗುವುದಿಲ್ಲ. ರೈತರ ಮೇಲೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಲ್ಲೆ ನಡೆಸಿದರೂ ಕೂಡಾ ಬನ್ನಿ, ಜೊತೆಯಲ್ಲಿ ನಾವು ಕೂಡ ಬರುತ್ತೇವೆ, ಹೋಗೋಣ ಎಂದು ಹೇಳಿದರೂ ಅವರು ಬರುವುದಕ್ಕೆ ತಯಾರಿಲ್ಲ. ದಯಮಾಡಿ ತಾವು ಕ್ಷಮಿಸಬೇಕು. ನಾನು ಸಾಧಾರಣವಾಗಿ ಇಂಥ ವಿಚಾರಗಳಲ್ಲಿ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ. ಈ ಸದನದಲ್ಲಿ ಈ ರೈತ ವಿರೋಧಿ ಸರ್ಕಾರವನ್ನು ವಿರೋಧಿಸದೇ ನನಗೆ ಬೇರೆ ಮಾರ್ಗವೇ ಇಲ್ಲ. ಆದುದರಿಂದ ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗುವವರೆಗೂ ಈ ಸದನದಲ್ಲಿ ಪಾಲುಗೊಳ್ಳುವುದಕ್ಕೆ ಸಾಧ್ಯವಿಲ್ಲ. ನಾವು ಕೂಡಾ ಅಲ್ಲಿಗೆ ಹೋಗಿ ಬರುತ್ತೇವೆ ಎಂದು ಹೇಳಿದರೂ ಕೂಡ ಇವರು ಸಿದ್ಧವಿಲ್ಲ. ಈ ಸದನದಲ್ಲಿ ನಮ್ಮ ಪಕ್ಷ ಮಾತ್ರ ಪಾಲುಗೊಳ್ಳುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಾವು ಸಭಾ ತ್ಯಾಗವನ್ನು ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಜನತಾದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಮ್ಯಾಜಿಸ್ಟಿರೀಯಲ್ ಎನ್‌ಕ್ವಯರಿ ಸಾಮಾನ್ಯವಾಗಿ ಎಲ್ಲ ಸಂದರ್ಭಗಳಲ್ಲಿಯೂ ನಡೆಯುತ್ತದೆ. ಒಂದು ಸಣ್ಣ ಘಟನೆ ನಡೆದರೂ ಕೂಡಾ ಮ್ಯಾಜಿಸ್ಟಿರಿಯಲ್ ಎನ್‌ಕ್ವಯರಿ ನಡೆಯುತ್ತದೆ. ಸಾಮಾನ್ಯವಾದ ಘಟನೆ ನಡೆದರೂ ಕೂಡಾ ಮ್ಯಾಜಿಸ್ಟಿರಿಯಲ್ ಎನ್‌ಕ್ವಯರಿ ನಡೆಯುತ್ತದೆ. ನಾನು ಈಗಾಗಲೇ ತಿಳಿದುಕೊಂಡಿದ್ದೇನೆ, ಅಲ್ಲಿರತಕ್ಕಂಥ ಅಸಿಸ್ಟೆಂಟ್ ಕಮೀಷನರ್‌ಗೆ ಜಿಲ್ಲಾಧಿಕಾರಿಗಳು ನಿರ್ದೇಶನವನ್ನು ಕೊಟ್ಟಿದ್ದಾರೆ, ಅದನ್ನು ಎನ್‌ಕ್ವಯರಿ ಮಾಡಿ ಎನ್ನತಕ್ಕಂಥ ಆಜ್ಞೆಯನ್ನು ಕೂಡಾ ಮಾಡಿದ್ದಾರೆ ಎನ್ನತಕ್ಕಂಥದ್ದನ್ನು ತಿಳಿದುಕೊಂಡಿದ್ದೇನೆ. ಆದರೆ ಅದು ಕಣ್ಣೊರೆಸತಕ್ಕಂಥ ತಂತ್ರ. ಈ ಕಣ್ಣೊರೆಸತಕ್ಕಂಥ ತಂತ್ರ ಬೇಡ. ನಿಜವಾಗಲೂ ಕೂಡ ಇವತ್ತಿನ ದಿವಸ ನೀವೇ ಆರೋಪಿಗಳು ಎಂದು ನಾವು ಹೇಳುವುದಕ್ಕೆ ತಯಾರಾಗಿಲ್ಲ, ವಿಚಾರಣೆಯಾಗಲಿ.

ಶ್ರೀ ಧರ್ಮಸಿಂಗ್ : ವಿಚಾರಣೆ ಆಗುತ್ತಿದೆ.

ಶ್ರೀ ಸಿ. ಬೈರೇಗೌಡ : ವಿಚಾರಣೆ ಎಂದರೆ ನ್ಯಾಯಾಂಗ ತನಿಖೆಯಾಗಲಿ. ನಾನು ಅದನ್ನೇ ಹೇಳುತ್ತಿದ್ದೇನೆ, ಇದು ಕಣ್ಣೊರೆಸತಕ್ಕಂಥ ತಂತ್ರ. ನೂರೆಂಟು ಮ್ಯಾಜಿಸ್ಟಿರೀಯಲ್ ಎನ್‌ಕ್ವಯರಿಗಳು ಆಗಿವೆ. ಆದರೆ ಪ್ರತಿಫಲ ಏನಾಗಿದೆ? ಅಲ್ಲಿ ಅಮಾನುಷವಾದ ಕೃತ್ಯ, ಭೀಕರವಾದ ಕೃತ್ಯ ಏನು ನಡೆದಿದೆ, ಅದನ್ನು ಸರಿದೂಗಿಸಬೇಕಾಗಿದ್ದರೆ, ಆಗಿರತಕ್ಕಂಥ ಕೃತ್ಯ ಬಯಲಿಗೆ ಬರಬೇಕಾಗಿದ್ದರೆ ಅದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕಾಗುತ್ತದೆ. ದಯವಿಟ್ಟು ತಾವು ಇದಕ್ಕೆ ಒಪ್ಪಿಕೊಳ್ಳಿ. ನ್ಯಾಯಾಂಗ ತನಿಖೆಯನ್ನು ಮಾಡಿಸುತ್ತೇವೆಂದು ತಾವು ಅನೌನ್ಸ್ ಮಾಡಿ. ದಯವಿಟ್ಟು ಇದನ್ನು ಒಪ್ಪಿಕೊಳ್ಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಂತ್ರಿಗಳು ಮ್ಯಾಜಿಸ್ಟಿರಿಯಲ್ ಎನ್‌ಕ್ವಯರಿ ಮಾಡುತ್ತೇನೆ ಎಂದು ಏನೋ ಹೇಳಿದರು.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಮಂತ್ರಿಗಳು ಸ್ವಾಮಿ. ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಈಶ್ವರಪ್ಪನವರೇ, ನಾನು ನಿಮ್ಮ ಆ ಮಾತನ್ನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಮಂತ್ರಿಗಳಾದ ಮಾತ್ರಕ್ಕೆ ಅವರು ಜವಾಬ್ದಾರಿಯಿಂದ ಮಾತನಾಡಬೇಕು, ಶಾಸನಸಭಾ ಸದಸ್ಯರಾದರೆ ನೀವು ಬೇಜವಾಬ್ದಾರಿಯಿಂದ ಮಾತನಾಡಬಹುದು ಎನ್ನುವ ಅರ್ಥ ಬರುತ್ತದೆ. ಇಲ್ಲಿ ಎಲ್ಲರೂ ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) : ಅದಕ್ಕಿಂತಲೂ ಹೆಚ್ಚಾಗಿ ಶಾಸಕರು, ಮಾಮೂಲಿ ಶಾಸಕರು ಎಂಬ ಈ ವಿಂಗಡಣೆ ಯಾವಾಗ ಆಯಿತು?

ಅಧ್ಯಕ್ಷರು : ಈಶ್ವರಪ್ಪನವರೇ, ಅದನ್ನು ವಾಪಸ್ ತೆಗೆದುಕೊಂಡು ಬಿಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಏನನ್ನೋ ಹೇಳುವುದಕ್ಕೆ ಹೊರಟಿದ್ದಾರೆ.

MR. SPEAKER : The Chief Minister has yielded the floor to Prof. M.D. Nanjundaswamy.

(ಗೊಂದಲ)

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಹೇಗೆ ಮಾಡೋದು ಎಂದು ನಾನು ಅದನ್ನೆ ಹೇಳೋಣ ಎಂದು ಇದ್ದೆ.

ಅಧ್ಯಕ್ಷರು : ಅದನ್ನೇ ಹೇಳಿ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮ್ಯಾಜಿಸ್ಟಿರಿಯಲ್ ಎನ್‌ಕ್ವಯರಿ ಬಗ್ಗೆ ನಾನು ವಿಚಾರ ಶುರುಮಾಡಿದೆ. ಆದರೆ ನಡುವೆ ಯಾರೋ ಅವರಿಗೆ ಇವರು ಶಿಸ್ತು ಹೇಳುವುದು, ಇವರಿಗೆ ಅವರು ಶಿಸ್ತು ಹೇಳುವುದು ನಡೆಯುತ್ತಿತ್ತು. ತಾವು ಯಾರ್‍ಯಾರು ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳುತ್ತಿದ್ದೀರಿ. ನಾನು ಎದ್ದು ನಿಂತ ಕೂಡಲೇ ಮಾನ್ಯ ಶಿವಕುಮಾರ್‌ರವರು ಎದ್ದು ನಿಂತು ಎಂಥದ್ದೊ ಒಂದು ಮಾತನಾಡಿದರು. ಅದು ಅವರಿಗೆ ಶೋಭೆ ಅಲ್ಲ. ಸಾಮಾನ್ಯ ಸದಸ್ಯರಾಗಿದ್ದಾಗಲೂ ಅದನ್ನು ಮಾಡಕೂಡದು. ಮಂತ್ರಿಗಳಾದ ಮೇಲಂತೂ ಅದನ್ನು ಮಾಡಲೇ ಕೂಡದು. ತಾವು ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಬಗ್ಗೆ ತಾವು ಮಾತನಾಡುತ್ತಿದ್ದೀರಿ. It is not an enquiry at all. how can you call a Magisterial enquiry an enquiry at all. It is a process where in the accused is becoming judge in his own case. It is not an enquiry. ನಿಮಗೆ ಪ್ರಾಮಾಣಿಕತೆ ಇದ್ದರೆ, ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಿ. ಇಲ್ಲದಿದ್ದರೆ ಇದೇ ರೀತಿ ಬ್ರಿಟೀಷರ ಪಳೆಯುಳಿಕೆಯಾಗಿ ಉಳಿಸಿಕೊಂಡಿರುವ ಪೋಲೀಸ್ ವ್ಯವಸ್ಥೆ ಏನಿದೆ ಅದನ್ನೇ ಮುಂದುವರಿಸಿಕೊಂಡು ಹೋಗುತ್ತೇವೆ, ನಾವು ಬ್ರಿಟೀಷರ ದತ್ತು ಪುತ್ರರು ಎಂದು ಘೋಷಣೆ ಮಾಡಿಕೊಂಡು ಬಿಡಿ ಸಾಕು.

ಶ್ರೀ ಎಸ್. ಬಂಗಾರಪ್ಪ : ಅಲ್ಲಿ ನಡೆದಿರತಕ್ಕ ಘಟನೆಯ ವಿವರಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ಏಕೆ, ತಮಗೆ ಏನಾಗಬೇಕು?

ಶ್ರೀ ವಾಟಾಳ್ ನಾಗರಾಜ್ : ನಾನೇನು ಮಾತನಾಡಲಿಲ್ಲ, ಗಂಭೀರವಾಗಿ ಕುಳಿತಿದ್ದೇನೆ. ನಿಮಗೆ ಏನು ಆಗಬೇಕಾಗಿತ್ತು ಎಂದರೆ ನಾನು ಏನು ಹೇಳಲಿ, ಇದ್ಯಾಕೋ ಮುಖ್ಯಮಂತ್ರಿಗಳು ಹೀಗಾಗಿದ್ದಾರೆ ನನಗೆ ಗೊತ್ತಿಲ್ಲ.

ಅಧ್ಯಕ್ಷರು : ನನಗೆ ಬಂದಿರುವ ತೊಂದರೆ ಏನು ಅಂದರೆ, ನಿಮ್ಮಿಬ್ಬರ ಸಂಬಂಧ ಬಹಳ ಹಳೆಯ ಸಂಬಂಧ. ಅದೇ ನನಗೆ ಬಂದಿರತಕ್ಕ ತೊಂದರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವರು ಹೀಗೇ ನೋಡುತ್ತಿದ್ದರು. ನನಗೆ ಸ್ವಲ್ಪ ಭಯ ಆಯಿತು. ಆಗ ಅವರನ್ನು ನೋಡಿದೆ ಏನು ಆಗಬೇಕು ಅಂದರೆ ನಾವು ಏನು ಹೇಳೋಣ, ಹೇಳಿ ಮತ್ತೆ.

ಶ್ರೀ ಎಸ್. ಬಂಗಾರಪ್ಪ : ನಮ್ಮ ಕಡೆ ನೋಡುವುದು ಅಲ್ಲೇ ಮಾತನಾಡುವುದು, ನಮ್ಮ ಕಡೆ ನೋಡುವುದು, ಅಲ್ಲೇ ಮಾತನಾಡುವುದು, ಬೇರೆ ಕಡೆ ನೋಡಿ ಏತಕ್ಕೆ ಮಾತನಾಡಬಾರದು.

ಶ್ರೀ ವಾಟಾಳ್ ನಾಗರಾಜ್ : ನಾವು ಈ ಸಭೆಗೆ ತೆನಾಲಿ ರಾಮಕೃಷ್ಣನ ತರಹ ಮಡಿಕೆ ಹಾಕಿಕೊಂಡು ಬಂದು ಬಿಡುತ್ತೇವೆ. ಆಗ ನಾವು ಯಾರನ್ನು ನೋಡುವುದಿಲ್ಲ.

ಶ್ರೀ ಎಂ. ಮಹದೇವ್ : ನಿಮ್ಮ ಟೋಪಿಯನ್ನು ಉಲ್ಟಾ ಮಾಡಿಬಿಡಿ, ಅದೇ ಮಡಿಕೆ ಆದ ಹಾಗೆ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಈ ಘಟನೆಯ ವಿವರಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇನ್ನುಳಿದ ಮಾನ್ಯ ವಿರೋಧಪಕ್ಷದ ಮಿತ್ರರು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಬಂದಿರತಕ್ಕ ವರದಿಗಳ ಆಧಾರದ ಮೇಲೆ ವಿಷಯವನ್ನು ಯಾರಾದರೂ ಕೂಡ ಇಡಬೇಕಾಗುತ್ತದೆ. ಆ ರೀತಿ ಅವರು ಇಟ್ಟಿದ್ದಾರೆ. ಕೋಲಾರ ಜಿಲ್ಲೆಯವರಾದಂಥ ಮಾನ್ಯ ಬೈರೇಗೌಡರು ಕೂಡ ವಿವರಗಳನ್ನು ಹೆಚ್ಚಾಗಿ ಪಡೆಯುವುದಕ್ಕೆ ಸಾಧ್ಯವಿರುತ್ತದೆ. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಅದರ ಆಧಾರದ ಮೇಲೆ ವಿವರಗಳನ್ನು ಇಡತಕ್ಕ ಪ್ರಯತ್ನವನ್ನೂ ಅವರು ಕೂಡ ಮಾಡಿದ್ದಾರೆ. ಆ ವಿವರಗಳ ಆಧಾರದ ಮೇಲೆ ಬೇಡಿಕೆ ಇದೆ. ಈ ಸದನದಲ್ಲಿ ಒತ್ತಡ ಇದೆ. ಸರ್ಕಾರ ಅದನ್ನು ಒಪ್ಪಬೇಕು. ಒಂದು ನ್ಯಾಯಾಂಗ ತನಿಖೆ ಮಾಡಬೇಕು ಎನ್ನತಕ್ಕ ಒತ್ತಡ ಇದೆ. ಇವತ್ತು ವಿವರಗಳು ಒಂದಾದರೆ ಸರ್ಕಾರದ ವತಿಯಿಂದ ಏನು ಕಾರ್ಯಕ್ರಮಗಳು ಆಗಬೇಕು ಎನ್ನತಕ್ಕದ್ದು ಮತ್ತೊಂದು ವಿವರಗಳ ಬಗ್ಗೆ ಮಾತನಾಡಬೇಕಾದರೆ ವಿರೋಧ ಪಕ್ಷದ ನಾಯಕರಾದ ಮಾನ್ಯ ಚಂದ್ರೇಗೌಡರು ಮತ್ತು ಇತರ ಮಿತ್ರರು ಇದ್ದಿದ್ದರೆ ಒಳ್ಳೆಯದಿತ್ತು. ಅದಕ್ಕಾಗಿ ನಾನು ಅವರನ್ನು ಇರಿ ಇರಿ ಎಂದೆ. ಅವರು ಇಷ್ಟೊಂದು ಅರ್ಜೆಂಟಾಗಿ ಸಭಾತ್ಯಾಗ ಮಾಡುತ್ತಾರೆಂದು ನಾನು ತಿಳಿದುಕೊಂಡಿರಲಿಲ್ಲ. ಇವತ್ತು ರೈತ ಸಮುದಾಯವೇ ಹೆಚ್ಚಾಗಿರತಕ್ಕಂಥ ನಮ್ಮಂತಹ ಸಮಾಜದಲ್ಲಿ ರೈತರ ಮೇಲೆ ಗದಾ ಪ್ರಹಾರ, ತೊಂದರೆ, ಆಗಬಾರದು ಎನ್ನತಕ್ಕ ಒಂದು ನೀತಿಯನ್ನು ಇಟ್ಟುಕೊಂಡು ನಾವು ಕೂಡ ಇಷ್ಟು ವರ್ಷ ಬಂದಿದ್ದೇವೆ.

11.15 ಎ.ಎಂ.

ನಾವು ಸರ್ಕಾರದ ನೀತಿಯನ್ನು ಇಟ್ಟುಕೊಂಡಿದ್ದೇವೆ, ಪ್ರತಿಪಾದನೆ ಮಾಡುತ್ತೇವೆ. ರೈತ ಸಮುದಾಯಕ್ಕೆ ಅನ್ಯಾಯವಾಗಬಾರದು, ಒಂದು ವೇಳೆ ಅಲ್ಲಿ ಏನಾದರೂ ನಡೆದರೆ ಅವರ ಮನಸ್ಸಿಗೆ ನೋವಾದರೆ, ಆ ನೋವಿನಲ್ಲಿ ನಾವು ಅವಿಭಾಜ್ಯ ಅಂಗವಾಗಿ ಉಳಿಯತಕ್ಕಂಥ ಚಿಂತನೆಯನ್ನಿಟ್ಟೇ ನಾವು ಆಡಳಿತವನ್ನು ನಡೆಸುತ್ತಿದ್ದೇವೆ. ನಿಜ. ಕೆಲವೊಮ್ಮೆ ಸ್ಥಳೀಯ ಕಾರಣಗಳಿಂದಾಗಿ ಅಲ್ಲಿ on the spur of the moment ತತ್‌ಕ್ಷಣ ಏನಾದರೂ ನಡೆದರೆ, ಅದಕ್ಕೆ ಕಾರಣವೇನು ಎಂಬುದನ್ನು ವಿಚಾರಣೆಯ ಮುಖಾಂತರ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಬೇಕಾಗುತ್ತದೆ. ನಮ್ಮ ವಿರೋಧ ಪಕ್ಷದ ಸದಸ್ಯರು ಮಾತನಾಡುತ್ತಾ, ನಮ್ಮ ಸರ್ಕಾರ ರೈತ ವರ್ಗದ ಮೇಲೆ ದೊಡ್ಡ ಗಧಾ ಪ್ರಹಾರವನ್ನೇ ಮಾಡಿದೆ ಎಂದು ಹೇಳಿದ್ದಾರೆ. ಆದರೆ ಹಿಂದೆ ಅವರು ಆಡಳಿತದಲ್ಲಿದ್ದಾಗ ಏನಾದರೂ ಮಾಡಿದ್ದರೆ, ಒಂದು ವೇಳೆ ನಮ್ಮ ಕಾಲದಲ್ಲಿ ನಾವು ಆ ರೀತಿ ಏನಾದರೂ ಮಾಡಿದ್ದರೆ ಸರಿ ಎನ್ನತಕ್ಕಂಥ ವಾದವನ್ನು ನಾನು ಮಾಡುತ್ತಿಲ್ಲ. It is not my intention at all.

ಇವತ್ತು ರೈತ ಸಂಘದ ಪ್ರತಿನಿಧಿಗಳಿದ್ದಾರೆ. ನಮ್ಮ ಪುಣ್ಯಕ್ಕೆ ಅವರು ಕೂಡ ಇದ್ದಾರೆ. ಹಾಸನ ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ರೈತ ಸಂಘದವರು

ಚಳುವಳಿ ಮಾಡುವಂಥ ಕಾಲದಲ್ಲಿ ಏನಾಯಿತು ಎಂದು ಅವರಿಗೆ ಗೊತ್ತಿದೆ. ನಾನು ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿರುವ ಮಾನ್ಯ ಸದಸ್ಯರುಗಳಷ್ಟೇ ಅಲ್ಲ, ಅವರ ಸಂಘದ ಬೇರೆ ಮುಖಂಡರುಗಳು ಪದಾಧಿಕಾರಿಗಳ ಮೇಲೆ ಏನು ದೌರ್ಜನ್ಯ ನಡೆದಿದೆ, ಯಾವ ರೀತಿ ಸ್ವತಃ ಅವರ ಮೈಗೆ ಪೆಟ್ಟುಬಿತ್ತು ಎನ್ನುವುದನ್ನು ಅವರೇ ಆ ಸಂದರ್ಭದಲ್ಲಿ ಹೇಳಿದ್ದಾರೆ. ಈ ಮಾತನ್ನು ನಾನು ಹೇಳುತ್ತಿಲ್ಲ. ಇವತ್ತು ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಶ್ರೀಮಾನ್ ಡಿ.ಬಿ. ಚಂದ್ರೇಗೌಡರ ಪಕ್ಷದ ಆಡಳಿತ ಇರುವಂಥ ಕಾಲದಲ್ಲಿ ರೈತ ಸಮುದಾಯದ ಮೇಲೆ ಪದೇ ಪದೇ ದೊಡ್ಡ ಗಧಾ ಪ್ರಹಾರವೇ ನಡೆದಿದೆ. ಬರೀ ಕೇಸ್ ಹಾಕಿರುವಂಥ ವಿಚಾರಕ್ಕೆ ನಾನು ಹೋಗುತ್ತಿಲ್ಲ. ರೈತ ಸಮುದಾಯದ ಮೇಲೆ ಯಾವ ರೀತಿ ಪೆಟ್ಟು ಬಿತ್ತು ಎನ್ನುವುದನ್ನು ಮಾತ್ರ ಪ್ರಸ್ತಾಪ ಮಾಡುತ್ತಿದ್ದೇನೆ. ಇದರ ಬಗ್ಗೆ ನಾನು ವಿವರಗಳಿಗೆ ಹೋಗದೆ ಅದನ್ನು ಇಲ್ಲಿಗೇ ಬಿಡುತ್ತಿದ್ದೇನೆ. ಇದರ ಹಿನ್ನೆಲೆ ಸಾಕು. ಸಭಾತ್ಯಾಗ ಮಾಡುವುದು ನಿಮ್ಮ ಹಕ್ಕು. ಸ್ವಲ್ಪ ಲೇಟಾಗಿ ಮಾಡಿದ್ದರೆ ಬಹಳ ಒಳ್ಳೆಯದಿತ್ತು ಎಂದು ನಾನು ಹೇಳಿದೆ. ಆ ಕಾಲದಲ್ಲಿ ಘಟನೆಗಳು ನಡೆದವು, ಕೇಸುಗಳನ್ನು ಹಾಕಿದರು. ಕೇಸುಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ನಾವು ಪ್ರಕಟ ಮಾಡಿದ್ದೇವೆ, ಮಂತ್ರಿಮಂಡಲದಲ್ಲಿ ತೀರ್ಮಾನ ಮಾಡಿದ್ದೇವೆ. ತೀರ್ಮಾನವಾದ ಮೇಲೆ ಅದರ ಪಟ್ಟಿಯನ್ನು ಮಾಡುವುದಕ್ಕೋಸ್ಕರ ಪೋಲೀಸ್ ಇಲಾಖೆಯ ಅಧಿಕಾರಿಗಳನ್ನೂ ಸಿದ್ಧ ಮಾಡಿದ್ದೇವೆ. ಸುಮಾರಾಗಿ ಪಟ್ಟಿ ತಯಾರಾಗಿದೆ. ನಿನ್ನೆ ದಿವಸ ಕೂಡ ರೈತ ಸಂಘದ ಪ್ರತಿನಿಧಿಗಳ ಜೊತೆ ಮಾತನಾಡಿದ್ದೇನೆ. ನಮ್ಮ ಪಟ್ಟಿಯಲ್ಲಿ ಯಾವುದಾದರೂ ಕೇಸ್ ಬಿಟ್ಟು ಹೋಗಿದ್ದರೆ, ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸಬೇಕಾದರೆ ದಯವಿಟ್ಟು ನಿಮ್ಮ ಹತ್ತಿರ ಇರತಕ್ಕಂಥ ಕೇಸುಗಳ ನಂಬರುಗಳನ್ನು ಕೊಡಿ ಎಂದು ಹೇಳಿದ್ದೇನೆ. ಏಕೆಂದರೆ ಆ ಕೇಸುಗಳು ಕರ್ನಾಟಕದಾದ್ಯಂತ ಇದೆ. ಆದ್ದರಿಂದ ದಯಮಾಡಿ ಅವನ್ನೆಲ್ಲಾ ನಮಗೆ ಒದಗಿಸಿಕೊಡಿ ಎಂದು ಅವರಲ್ಲಿ ಸರ್ಕಾರದ ಪರವಾಗಿ ವಿನಂತಿ ಮಾಡಿದ್ದೇನೆ. ಇದರ ಉದ್ದೇಶವೇನೆಂದರೆ ರೈತ ವರ್ಗದ ಮೇಲಿರತಕ್ಕಂಥ ಕೇಸ್‌ಗಳು ಅಲ್ಲೇ ಮುಂದುವರೆದರೆ, ರೈತ ವರ್ಗದವರು ಸುಮ್ಮನೆ ವಿನಾಕಾರಣ ಕೋರ್ಟಿಗೆ ಓಡಾಡಬೇಕಾಗುತ್ತದೆ, ಅವರಿಗೆ ತೊಂದರೆಯಾಗುತ್ತದೆ, ಅನ್ಯಾಯವಾಗುತ್ತದೆ, ಈ ಕೇಸ್‌ಗಳಿಂದ ಅವರಿಗೆ ಮುಕ್ತಿ ಸಿಗಬೇಕು, ಅವರಿಗೆ ಆ ಕಾಲದಲ್ಲಿ ತೊಂದರೆಯಾಗಿದ್ದರೆ ನಾವು ಅದಕ್ಕೆ ಅವಕಾಶ ಕೊಡಬಾರದು ಎನ್ನುವ ಸದುದ್ದೇಶದಿಂದ ನಾವು ಈ ತೀರ್ಮಾನವನ್ನು ಮಾಡಿದ್ದೇವೆ. ಈ ಸದನವು ಮುಗಿಯುವುದರೊಳಗೆ ಈ ಕೇಸ್‌ಗಳನ್ನು ಹಿಂತೆಗೆದುಕೊಳ್ಳುವಂಥ ಸರ್ಕಾರಿ ಆದೇಶವನ್ನು ನಾವು ಹೊರಡಿಸುತ್ತಿದ್ದೇವೆ. ಈ ಮಾತನ್ನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ನಂಜುಂಡಸ್ವಾಮಿಯವರಿಗೆ ಹಾಗೂ ಬಾಬುಗೌಡ ಪಾಟೀಲ್‌ರವರಿಗೆ ನಿನ್ನೆ ಸಾಯಂಕಾಲ 6 ಗಂಟೆಯಲ್ಲಿ ತಿಳಿಸಿದ್ದೇನೆ. ಇದನ್ನು ನಾನು ಹೊಗಳಿಕೆಗಾಗಿ ಹೇಳುತ್ತಿಲ್ಲ. ಇದು ಸರ್ಕಾರದ ಕರ್ತವ್ಯದ ಒಂದು ಅವಿಭಾಜ್ಯ ಅಂಗವೆಂದು ನಾನು ಹೇಳುತ್ತೇನೆ. ಕರ್ನಾಟಕ ರಾಜ್ಯದ ರೈತರ ಸಮಸ್ಯೆಗಳು ಅಪಾರವಾಗಿವೆ. ಇದಕ್ಕೆ ನೇರವಾಗಿ ಸಂಬಂಧಪಡುವುದರಿಂದ ಒಂದು ವಿಚಾರ ಮಾತ್ರ ಪ್ರಸ್ತಾಪ ಮಾಡಿದೆ. ಬೇರೆ ಬೇರೆ ವಿಚಾರಗಳೂ ಇವೆ. ಅವುಗಳನ್ನು ಸಾಂದರ್ಭಿಕವಾಗಿ ಪ್ರಸ್ತಾಪ ಮಾಡೋಣ. ನಮ್ಮ ಸರ್ಕಾರ ಕರ್ನಾಟಕ ರಾಜ್ಯದ ರೈತರ ಸಮಸ್ಯೆಗಳನ್ನು ಬಗೆಹರಿಸಲು ಕಾಳಜಿ ಹೊಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೇಸುಗಳನ್ನು ವಾಪಸ್ ತೆಗೆದುಕೊಂಡಿದ್ದೀರಿ ಆದರೆ ರೈತರ ಸಾಲ ಮನ್ನಾ ಆಗದೇ ಅವರು ಬೀದಿ ಪಾಲಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ನೀವು ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ನಾವು ಪ್ರಸ್ತಾಪ ಮಾಡಿದ್ದೇವೆ, ಬೇರೆಯವರೂ ಪ್ರಸ್ತಾಪ ಮಾಡಿದ್ದಾರೆ, ಇದು ಹೊಸದೇನಲ್ಲ. ನೀವು ಪ್ರಸ್ತಾಪ ಮಾಡುವುದಕ್ಕಿಂತ ಮುಂಚೆಯೇ ಪ್ರಸ್ತಾಪ ಮಾಡಿದವರು

ನಾವಿಲ್ಲಿದ್ದೇವೆ. ಎಲ್ಲರೂ ಪ್ರಸ್ತಾಪ ಮಾಡಿದ್ದಾರೆ ಅದಕ್ಕಾಗಿಯೇ ಸ್ಕೀಮ್ಸ್ ಬಂದಿದೆ. ಈ ಸಂದರ್ಭದಲ್ಲಿ ವಿವರಗಳಿಗೆ ಹೋಗುವುದು ಬೇಡ, ಹೋದರೆ ವಿಷಯಾಂತರವಾಗುತ್ತದೆ. ರೈತ ಸಮುದಾಯಕ್ಕೆ ಸಂಬಂಧಪಟ್ಟಿರುವ ಸಮಸ್ಯೆಗಳು ಯಾವುದಿದ್ದರೂ ಅವುಗಳನ್ನು ಬಗೆಹರಿಸಬೇಕೆಂಬ ಉತ್ಕಟೇಚ್ಛೆ ನಮ್ಮ ಹೃದಯಾಂತರಾಳದಲ್ಲಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರಲ್ಲಿ ವ್ಯತ್ಯಾಸ ಬರುವುದಕ್ಕೆ ಸಾಧ್ಯವಿದೆ. ಎಲೆಕ್ಟ್ರಿಸಿಟಿ ಸಪ್ಲೈ ಮಾಡತಕ್ಕಂಥ ವಿಚಾರದಲ್ಲಿ ತಾವೇ ಹಿಂದೆ ಪ್ರಸ್ತಾಪ ಮಾಡಿದ್ದೀರಿ, ಡೆಲಿಗೇಷನ್ ತಂದಿದ್ದೀರಿ, ಮತ್ತು ಆ ಸಂದರ್ಭದಲ್ಲಿ ಕೆ.ಕೆ. ಗೆಸ್ಟ್ ಹೌಸ್‌ನಲ್ಲಿ ಕೂಡ ನಾವು ಮಾತನಾಡಿದ್ದೇವೆ. ಅದು ಈಗಲೂ ಕೂಡ ನನಗೆ ಸ್ಪಷ್ಟವಾಗಿ ನೆನಪಿದೆ. ಅನಂತರ ನಾವು ಕಾರ್ಯಕ್ರಮ ಹಾಕಿದ್ದೇವೆ. ನಾವು ತಮ್ಮನ್ನು ಹೊಗಳಿದಿರಿ ಎನ್ನುವ ಮಾತನ್ನು ನಾನು ಆಡುವುದಿಲ್ಲ. ಆದರೆ, ಕೆಲವು ವಿಚಾರದಲ್ಲಿ ಕೆ.ಇ.ಬಿ. ಮುಖಾಂತರ ನಿರ್ದಿಷ್ಟ ಕಾರ್ಯಕ್ರಮಗಳನ್ನು ಹಾಕಿದ್ದೇವೆ ಎನ್ನತಕ್ಕಂಥ ಮಾತನ್ನು ತಾವೇ ಆಡಿರತಕ್ಕಂಥಾದ್ದು ರೆಕಾರ್ಡ್‌ನಲ್ಲಿದೆ. ನಾನು ಹೊಗಳುವ ದೃಷ್ಟಿಯಿಂದ ಹೇಳುವುದಿಲ್ಲ. ಉಳಿದ ವಿಚಾರವನ್ನು ನೀವು ಪ್ರಸ್ತಾಪ ಮಾಡಬಾರದೆಂದು ನಾನು ಹೇಳುವುದಿಲ್ಲ. ಕೆಇಬಿ ಎಲ್ಲಾ ಕೆಲಸ ಮಾಡಿ ಮುಗಿಸಿದೆ ಎನ್ನತಕ್ಕಂಥ ವಿಚಾರ ಕೂಡಾ ನಾನು ಹೇಳುತ್ತಿಲ್ಲ. That is not my point. ಆದರೆ ಕೆಲಸ ಮಾಡತಕ್ಕಂಥ ಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕೆಲಸವನ್ನು ಮಾಡತಕ್ಕಂಥಾದ್ದು ಬಾಕಿ ಇದೆ. ವಿಚಾರವನ್ನು ಹಿನ್ನೆಲೆಯಾಗಿಟ್ಟೇ ನಾನು ಈ ಸಂದರ್ಭದಲ್ಲಿ ಮಾತನಾಡುತ್ತಿರುವುದು. ಇವೊತ್ತು ನನಗೆ ಗೊತ್ತಿರುವ ಹಾಗೆ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕೂಡಾ ಕೆಲವು ತೊಂದರೆಗಳಿವೆ. ತಾವು ಆಗ ಇರಲಿಲ್ಲ, ಬೇರೆ ಪ್ರಶ್ನೆ ಬಂದಿತ್ತು. ಅದಕ್ಕೆ ಸಂಬಂಧಪಟ್ಟ ಹಾಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವುದಕ್ಕೆ ಎನ್‌ಜಿಇಎಫ್ ಆರ್ಡರ್‌ಗೆ ಕೊಟ್ಟಿದ್ದೇವೆ. 2-3 ತಿಂಗಳಲ್ಲಿ ಬರುತ್ತದೆ. ಅದು ಮಾನ್ಯ ಜಾಲಪ್ಪನವರು ಪ್ರಶ್ನೆ ಕೇಳಿದ್ದು ಇರಬಹುದು. ನಾವು ಸಪ್ಲೈ ಮಾಡಿ ಕಳುಹಿಸಿಕೊಟ್ಟಿದ್ದೇವೆ. ನಾವು ವರ್ಲ್ಡ್ ಬ್ಯಾಂಕಿನಿಂದ ಕೆಇಬಿಗೆ ಹಣವನ್ನು ತೆಗೆದುಕೊಳ್ಳುತ್ತಿದ್ದೇವೆ. ಸರ್ಕಾರ ಗ್ಯಾರಂಟಿಯಾಗಿ ನಿಲ್ಲುತ್ತದೆ. ಮೊನ್ನೆ ಮೊನ್ನೆ 60-65 ಕೋಟಿ ರೂಪಾಯಿಗಳನ್ನು ಸರ್ಕಾರ ಪುನಃ ಗ್ಯಾರಂಟಿಯಾಗಿ ನಿಂತು ಕೆಇಬಿಗೆ ಶಕ್ತಿ ತುಂಬುತ್ತಿದೆ. ತಮಗೆ ಗೊತ್ತಿರುವ ಹಾಗೆ ಕೆಇಬಿ ತಮ್ಮ ಕಾಲದಲ್ಲಿತ್ತು. ನಮ್ಮ ಕಾಲದಲ್ಲಿದೆ, ಅದನ್ನು ಸರಿಪಡಿಸುವುದು ಅಷ್ಟು ಸುಲಭವಲ್ಲ. ಅಷ್ಟಾದರೂ ಕೂಡಾ ಕೊನೆ ಪಕ್ಷ ರೈತರ ಬಗ್ಗೆ ಕೆಲಸ ಕಾರ್ಯ ನಡೆಯಲಿ ಎಂಬ ಸದುದ್ದೇಶದಿಂದ ಕೆಲಸ ಮಾಡುತ್ತಿದ್ದಾರೆ. ಶ್ರೀನಿವಾಸಪುರ ತಾಲ್ಲೂಕಿನಲ್ಲೂ ಕೂಡಾ ಕೆಲವು ತೊಂದರೆಗಳಿವೆ., ಇದು ವಾಸ್ತವಾಂಶ ವಿಚಾರ. ಈಗ ಅಲ್ಲಿ 33 ಕೆವಿ ಸಬ್ ಸ್ಟೇಶನ್ ಇದೆ. ಅನಂತರ activities to improve the power supply ಆ ಏರಿಯಾಗೆ ಸಂಬಂಧಪಟ್ಟ ಹಾಗೆ ನನಗೆ ಗೊತ್ತಿರುವ ಹಾಗೆ conversion of 33KV line to 66 K V line for about three Kms ಆಗಬೇಕು ಎನ್ನತಕ್ಕ ಕಾರ್ಯಕ್ರಮ ನೇರವಾಗಿ ನಮ್ಮ ಮುಂದಿದೆ. ಅನಂತರ providing one transformer of 8 MVA. Power transfer DCP obtained from NGEF ಇದು ಈಗಾಗಲೇ ತೆಗೆದುಕೊಂಡಿರತಕ್ಕಂಥಾದ್ದು. ಇದು ಮೂರ್ನಾಲ್ಕು ತಿಂಗಳಲ್ಲಿ ಮಾಡಿ ಮುಗಿಸುವುದಕ್ಕೆ ಸಾಧ್ಯವಾಗಬಹುದು. ಏಕೆಂದರೆ that takes time ಎನ್ನುವುದು ತಮಗೆ ಗೊತ್ತಿದೆ. ಅಲ್ಲಿ ಹೋಗಿ ಅವುಗಳನ್ನು ಇನ್ಸ್ಟಾಲ್ ಮಾಡಬೇಕು. ಅದರ ಲೈನ್ ವಿಚಾರ ಇದೆಲ್ಲ ಇಲಾಖೆಗೆ ಸಂಬಂಧಪಟ್ಟ ವಿವರಗಳು. ಇದಕ್ಕೆ ಸಂಬಂಧಪಟ್ಟ ಹಾಗೆ ಇಂಪ್ರೂವ್ ಆಗಬೇಕು. ಈ ಪರಿಸ್ಥಿತಿ ಇರುವುದು not only in Srinivasapur taluk, and not only in Kolar District but also elsewhere in some parts of Karnataka State. ಬೆಂಗಳೂರು ರೂರಲ್ ನಲ್ಲಿದೆ ತುಮಕೂರು ಡಿಸ್ಟ್ರಿಕ್ಟ್ ನಲ್ಲಿ ಕೆಲವು ಕಡೆ ಬಿತ್ತನೆ ಆಗಿಲ್ಲ, ಕುಡಿಯುವ ನೀರಿನ ಬಗ್ಗೆ ನಾನು ಹೇಳಿದೆ, ತಾವು ಇರಲಿಲ್ಲ, ಶಾಸಕ ಮಿತ್ರರು ಕೂಡಾ ಬಂದಿದ್ದರು. ತಮ್ಮ ಜಿಲ್ಲೆಯಲ್ಲಿ

ಕುಡಿಯುವ ನೀರಿನ ತೊಂದರೆ ಇದೆಯೆಂದು ಹೇಳಿದರು. ಅದಕ್ಕಾಗಿ ಹಣವನ್ನು ಸ್ಪೆಷಲ್ಲಾಗಿ ರಿಲೀಸ್ ಮಾಡುತ್ತಿದ್ದೇವೆ. including your own constituency drinking water ಗೆ ಆದ್ಯತೆ ಕೊಡಬೇಕೆನ್ನುವ ದೃಷ್ಟಿಯಿಂದ ನಾವು ಹಣವನ್ನು ಸ್ಪೆಷಲ್ಲಾಗಿ ರಿಲೀಸ್ ಮಾಡುತ್ತಿದ್ದೇವೆ. ಇದಕ್ಕೆ ಪವರ್ ಸಪ್ಲೈ ಸರಿಯಾಗಿರಬೇಕು. ಬರೀ ನಾವು ಅವುಗಳನ್ನು ತೆಗೆದುಕೊಂಡು ಹೋಗಿ ಇನ್ ಸ್ಟಾಲ್ ಮಾಡಿದರೆ ಬರುವುದಿಲ್ಲ. These are all the matters that take its own time. ಆದರೂ ಕೂಡ ನಾವು ಈ ಕೆಲಸವನ್ನು ವಾರ್ ಫೂಟಿಂಗ್ ನಲ್ಲಿ ತೆಗೆದುಕೊಳ್ಳುತ್ತೇವೆ. ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ನಾನು ತಮಗೆ ವಚನ ಕೊಡುತ್ತಿದ್ದೇನೆ. ಶಕ್ತಿ ಮೀರಿ ಕೆಇಬಿ ಯಿಂದ ವರ್ಕ್‌ಗೆ ನಾವು ನಿಲ್ಲಿಸುತ್ತೇವೆ. ಶ್ರೀನಿವಾಸಪುರ ತಾಲ್ಲೂಕು ಸೇರಿಕೊಂಡಂತೆ ನಾವು ವರ್ಕ್‌ಗೆ ನಿಲ್ಲಿಸುತ್ತೇವೆ. ಅದನ್ನು ಸರಿಪಡಿಸಲಿಕ್ಕೆ ಮತ್ತು ಪದೇ ಪದೇ ಘಟನೆಗಳು ನಡೆಯದಿರಲಿ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಎಲೆಕ್ಟ್ರಿಸಿಟಿ ಸಪ್ಲೈಸ್ ಗೆ ಸಂಬಂಧಪಟ್ಟಿರತಕ್ಕ ರೈತರ ಪಂಪ್ ಸೆಟ್ ಗಳು ಅಲ್ಲಿ ಬೇಕಾದಷ್ಟು ಬರುತ್ತವೆ. ಇನ್ನು ಘಟನೆಗೆ ಸಂಬಂಧಪಟ್ಟಿರತಕ್ಕ ವಿವರಗಳ ಬಗ್ಗೆ ಹೋಗುವ ಹಾಗಿದ್ದರೆ ನಾನು ಸ್ಪಷ್ಟವಾಗಿ ತಮ್ಮ ಗಮನಕ್ಕೆ ತರುವುದು ಇಷ್ಟೇ. ಸಪೋಸ್ ಜ್ಯುಡಿಷಿಯಲ್ ಎನ್‌ಕ್ವಯರಿಗೆ ನಾವು ಆರ್ಡರ್ ಮಾಡಿದ್ದೇವೆಂದು ಇಟ್ಟುಕೊಳ್ಳೋಣ. What happens it takes a very very long period. This is our rich experience. ಇದನ್ನು ಮರೆಯಬೇಡಿ. ನಮಗೂ ನಿಮಗೂ ಗೊತ್ತಿರುವ ಹಾಗೆ ಅದನ್ನು ಮಾನ್ಯ ಮಿತ್ರರು ಒಪ್ಪುತ್ತಾರೆಂದು ನಾನು ಭಾವಿಸಿದ್ದೇನೆ. ಪ್ರೊಸೀಜರಲ್ ಮ್ಯಾಟರ್ ಏನಿದೆ ಅದು ಲಾಂಗ್ ಡ್ಯುರೇಷನ್ ಆಗುತ್ತದೆ. ನಾವು ಆ ಕಡೆ ಕುಳಿತುಕೊಂಡಿದ್ದ ಕಾಲದಲ್ಲಿ ಕೆಲವು ಸಾರಿ ಈ ಪ್ರತಿಪಾದನೆ ಮಾಡಿ ಎಲ್ಲಾ ವಿಚಾರಗಳಿಗೂ ಜ್ಯುಡಿಷಿಯಲ್ ಎನ್‌ಕ್ವಯರಿ ಬೇಡ ಎನ್ನತಕ್ಕಂಥ ಮಾತನ್ನು ಹೇಳಿರತಕ್ಕಂಥಾದ್ದು ದಾಖಲೆಯಲ್ಲಿದೆ. ನಮಗೆ ಜ್ಯುಡಿಷಿಯಲ್ ಎನ್‌ಕ್ವಯರಿ ಬೇಡ, ಇದನ್ನಾದರೂ ಮಾಡಿಸಿಕೊಡಿ ಎಂದು ನಾವೇ ಕೇಳಿದ್ದೇವೆ. ನನಗೆ ಆ ಘಟನೆ ನೆನಪಿಲ್ಲ, ಬೇಕಾದರೆ ಪತ್ತೆ ಹಚ್ಚಿ ನಿಮಗೆ ಹೇಳುತ್ತೇನೆ. ಎಲ್ಲಾದಕ್ಕೂ ನಾವು ಜ್ಯುಡಿಷಿಯಲ್ ಎನ್‌ಕ್ವಯರಿಯನ್ನು ಮಾಡಬೇಕೆಂದು ಕೇಳಿದರೆ, ಆ ವಿಷಯದ ಪ್ರಾಮುಖ್ಯತೆಯೇ ಕಿತ್ತುಕೊಂಡು ಹೋಗುತ್ತದೆ ಎಂಬ ಮಾತನ್ನು ದಯವಿಟ್ಟು ಮರೆಯಬಾರದು. ಅದಕ್ಕೆ ಏನು ಮಾಡಬೇಕೆಂದರೆ, ಇಂತಹ ವಿಚಾರದಲ್ಲಿ ಸತ್ಯ ಪತ್ತೆ ಹಚ್ಚಿ ತಪ್ಪು ಮಾಡಿರತಕ್ಕ ಅಧಿಕಾರಿಗಳ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು ಎಂದು ಕಂಡುಬರತಕ್ಕ ಸಂದರ್ಭ ಬಂದಾಗ ಜ್ಯುಡಿಷಿಯಲ್ ಎನ್‌ಕ್ವಯರಿ - ನನ್ನ ಪ್ರಕಾರ I think that goes a long way in settling the issue. This is our view. One may or may not agree.

ಇಂತಹ ವಿಚಾರದಲ್ಲಿ ವ್ಯೂಸ್ ಡಿಫರ್ ಆಗುತ್ತದೆ. ನಾನು ಇಲ್ಲವೆಂದು ಹೇಳಲಾರೆ. Still you can demand, There should be a judicial enquiry. ಎಂದು ತಾವು ಹೇಳಬಹುದು ನಾನು ಇಲ್ಲವೆಂದು ಹೇಳಲಾರೆ. ಇವೊತ್ತು ತಮ್ಮ ಉದ್ದೇಶ ಏನೆಂದರೆ ಸತ್ಯಾಸತ್ಯತೆಯ ವಿಮರ್ಶೆಯಾಗಬೇಕು, ತಕ್ಷಣ ಕಾರ್ಯಕ್ರಮ ಮಾಡಬೇಕು. ತಪ್ಪಿತಸ್ಥರು ಕಂಡು ಬಂದರೆ ಅವರ ಮೇಲೆ ಕ್ರಮ ತೆಗೆದುಕೊಂಡು ಶಿಕ್ಷೆಯಾಗಬೇಕು ಎನ್ನುವುದು ಎನ್‌ಕ್ವಯರಿ ಮಾಡುವ ಉದ್ದೇಶ. If that is going to be decided , what is the use in just announcing or having a judicial enquiry. ಜ್ಯುಡಿಷಿಯಲ್ ಎನ್ ಕ್ವಯರಿಯ ಪ್ರಾಮುಖ್ಯತೆಯನ್ನು ಕಡಿಮೆ ಮಾಡಲು ನಾನು ಮಾತನಾಡುತ್ತಿಲ್ಲ, We have also got great respect for judicial enquiry. ಆದರೆ ಅದು ಬಹಳ ಲಾಂಗ್ ಡ್ಯುರೇಷನ್ ತೆಗೆದುಕೊಳ್ಳುವುದರಿಂದ ಅದರ ಇಂಪಾರ್ಟೆನ್ಸ್ ಹೊರಟು ಹೋಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಈ ಮಾತನ್ನು ಹೇಳಿದ್ದೇನೆ. That is why the Hon. Home Minister has said categorically that magisterial enquiry...

ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಆಗಿಬಿಟ್ಟರೆ ತತ್‌ಕ್ಷಣ ಸತ್ಯವನ್ನು ಪರಿಶೋಧನೆ ಮಾಡಲು ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಸರ್ಕಾರದ ಪರವಾಗಿ ವಿಚಾರ ಮಾಡಿ ಈ ಒಂದು ವಿಷಯವನ್ನು ಹೇಳಿದ್ದೇವೆ. ಸನ್ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ನಾನು ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಉಪನಾಯಕರು, ಮಿತ್ರರು ಇಲ್ಲಿ ಇಲ್ಲದಿದ್ದರೂ ಕೂಡ ತಮ್ಮೆಲ್ಲರಿಗೂ ಶ್ರೀ ಬೈರೇಗೌಡರನ್ನು ಸೇರಿಸಿಕೊಂಡು I am appealing to all of them to accept this in your own interest, and in the interest of bringing an truth behind these incidents. ಆದುದರಿಂದ ಇದನ್ನು ತಾವು ಒಪ್ಪಿಕೊಳ್ಳಬೇಕು, ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ ಮಾಡೋಣ. ಶೀಘ್ರವಾಗಿ ಮಾಡಿ ಸತ್ಯವನ್ನು ನೋಡೋಣ. ಮಾನ್ಯ ಬೈರೇಗೌಡರಿಗೆ ಇನ್ನೊಂದು ಮಾತನ್ನು ಹೇಳುತ್ತಿದ್ದೇನೆ. ವಾಟಾಲ್ ನಾಗರಾಜ್‌ರವರೆ ಅವರನ್ನು ಬಿಟ್ಟುಬಿಡಿ.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಸಲಹೆ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ : ಚರ್ಚೆ ಮಾಡುವುದು ಈಗಲ್ಲ. ನಾವು ಹೇಳಿದ್ದನ್ನು ಒಪ್ಪಿಕೊಂಡ ಮೇಲೆ ಏನು ಮಾಡಬೇಕಾಗಿತ್ತು ಎಂದು ಹೇಳುವುದು ಬಹಳ ಒಳ್ಳೆಯದು.

ಅಧ್ಯಕ್ಷರು : ಚರ್ಚೆ ಮಾಡುತ್ತಿದ್ದೀರೋ ಅಥವಾ ಸಮಾಲೋಚನೆ ಮಾಡುತ್ತಿದ್ದೀರೋ?

ಶ್ರೀ ಎಸ್. ಬಂಗಾರಪ್ಪ : ಮತ್ತೆ ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ we will never lag behind. ಈ ಮಧ್ಯೆ ಆ ಅಧಿಕಾರಿಗಳ ಬಗ್ಗೆ ಏನು ಕಾರ್ಯಕ್ರಮ ಹಾಕಬೇಕೆನ್ನುವುದು ಇದೆ. ಮೇಲ್ನೋಟಕ್ಕೆ ತಪ್ಪು ಎಂದು ಗೊತ್ತಾಗಬೇಕಾಗುತ್ತದೆ.

ಏಕೆಂದರೆ ಪ್ರೈಮಾರೆಸಿ ಬೇಕಾಗುತ್ತದೆ. Under law, there has to be a little case made out against these officers these are the officers who have committed mistake or have done something wrong ಎನ್ನುವುದು ನಮಗೆ ಗೊತ್ತಾಗಬೇಕು. ಆ ದೃಷ್ಟಿಯಿಂದ ತಾವು ಇದನ್ನು ಒಪ್ಪಿಕೊಳ್ಳಬೇಕೆಂದು ತಮ್ಮಲ್ಲಿ ವಿನಂತಿ ಅದರ ಬಗ್ಗೆ ಏನು ಕ್ರಮ ಹಾಕಬೇಕು ಅದನ್ನು ಸರ್ಕಾರ ಹಾಕುತ್ತದೆ. Hope you are now fully satisfied.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು 'I hope you are fully satisfied' ಎಂದರು. ಆದರೆ We are totally dissatisfied. ಕಾರಣವನ್ನು ನಾನು ಹೇಳಿದೆ. Magisterial enquiry is not an enquiry at all. ತಾವು ವಕೀಲರಿದ್ದೀರಿ, ಇನ್ನೂ ಅದೇ ಹಠವನ್ನು ಮಾಡುತ್ತೇವೆ ಎಂದರೆ, ನಾನು ಏನು ಕೊನೆಯಲ್ಲಿ ಹೇಳಿದೆ ಆ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ನಾನು ಈ ಸಭೆಯಿಂದ ಹೊರಗೆ ಹೋಗಬೇಕಾಯಿತು. ತಾವು ಕಳೆದ ಸರ್ಕಾರದ ಜೊತೆ ಹೋಲಿಕೆ ಮಾಡಿಕೊಂಡಿರಿ. ತಮ್ಮ ವರ್ಣನೆ ಪ್ರಕಾರ ಕಳೆದ ಸರ್ಕಾರದವರು ಬ್ರಿಟಿಷರ ನೇರ ಪುತ್ರರು. ನಾನು ಹೇಳಿದೆ, ನೀವು ಬ್ರಿಟಿಷರ ದತ್ತು ಪುತ್ರರ ತರಹ ನಡೆದುಕೊಳ್ಳಬೇಡಿ ಎಂದು. ಮಾನ್ಯ ಅಧ್ಯಕ್ಷರೇ, ಹಾಗೆಯೇ ನಡೆದುಕೊಳ್ಳುತ್ತೇವೆಂದು ಅವರು ಹಠ ಮಾಡುತ್ತಿದ್ದಾರೆ. ಅದನ್ನು ಪ್ರತಿಭಟಿಸಿ ನಾನು ಸಭಾ ತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಪ್ರೊ. ಎಂ.ಡಿ. ನಂಜುಂಜಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಈಗಾಗಲೇ ಹೇಳಿಕೆಯನ್ನು ಪ್ರತಿಭಟಿಸಿ ವಾಕ್ ಔಟ್ ಮಾಡಿದ್ದಾರೆ. ನಾವು ಪ್ರತಿಭಟಿಸಿ ಇಲ್ಲೇ ಕುಳಿತುಕೊಳ್ಳುತ್ತೇವೆ. ಈಗಾಗಲೇ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಮುಖ್ಯಮಂತ್ರಿಗಳು ಶಾಂತಿಯಿಂದ ಉತ್ತರವನ್ನು ಕೊಟ್ಟಿದ್ದಾರೆ. ಆ ಶಾಂತಿ ರೀತಿಯ ಉತ್ತರ ಕೊಟ್ಟಿದ್ದಕ್ಕೆ ಅಷ್ಟರಮಟ್ಟಿಗೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರು ನ್ಯಾಯಾಂಗ ತನಿಖೆ ಮಾಡಲು ತಯಾರಾಗಿಲ್ಲ. ಇಲ್ಲಿರತಕ್ಕ ಸಮಸ್ಯೆ ಏನೆಂದರೆ ....

ಅಧ್ಯಕ್ಷರು : ನ್ಯಾಯಾಂಗ ತನಿಖೆಯ ವಿಚಾರದಲ್ಲಿ ತಮಗೆ ಒಂದು ವಿಷಯವನ್ನು ನೆನಪಿಸುತ್ತೇನೆ. ಮ್ಯಹಾಮ್ ಘಟನೆ ನಡೆಯಿತಲ್ಲಾ ಆಗ ನ್ಯಾಯಾಂಗ ತನಿಖೆ ಮಾಡಿದ ಜಡ್ಜ್‌ಗೆ ಕೋಣೆ ಕೊಡಲಿಲ್ಲ, ಸಂಬಳ ಕೊಡಲಿಲ್ಲ, ಪಾಪ ಅವರು ರಾಜೀನಾಮೆ ಕೊಟ್ಟ ಮೇಲೂ ಕೂಡ ನನಗೆ ಕೇಂದ್ರ ಸರ್ಕಾರದಿಂದ ಇಷ್ಟು ಹಣ ಬರಬೇಕು ಅದನ್ನು ಕಳಿಸಿ ಎಂದು ಅರ್ಜಿಯನ್ನು ಕೊಡುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ ಅದು ಸರ್ಕಾರದ ತಪ್ಪಲ್ಲವೆ? ವಿರೋಧಪಕ್ಷದವರ ತಪ್ಪಲ್ಲ. ನ್ಯಾಯಾಂಗ ತನಿಖೆಗೆ ಯಾರನ್ನು ನೇಮಿಸುತ್ತಾರೆ, ಅವರಿಗೆ ಎಲ್ಲಾ ವ್ಯವಸ್ಥೆಗಳನ್ನು ಮಾಡಬೇಕಾದುದು ಸರ್ಕಾರದ ಕೆಲಸ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ನ್ಯಾಯಾಂಗ ತನಿಖೆ ಮಾಡುವುದರಿಂದ ನಿಧಾನವಾಗುತ್ತದೆ ಎಂದರು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ ಮೆಜಿಸ್ಟೀರಿಯಲ್ ಎನ್‌ಕ್ವಯರಿ ಎನ್ನತಕ್ಕಂಥಾದ್ದು ಮಾಮೂಲಿಯಾಗಿ ನಡೆಯುತ್ತಾ ಇರತಕ್ಕಂಥಾದ್ದು.

ಅಧ್ಯಕ್ಷರು : ಅದು ಸಹ ಸರಿ.

SRI C.BYREGOWDA : Magisterial enquiry is just like departmental enquiry.

Mr. SPEAKER : Is there something between the Judicial enquiry and the Magisterial enquiry -some via media?

ಶ್ರೀ ಸಿ. ಬೈರೇಗೌಡ : ಆದರೆ ಅಲ್ಲಿ ಇರತಕ್ಕಂಥ ಮೂಲಭೂತ ಸಮಸ್ಯೆ ಏನೆಂದರೆ ನನಗೆ ಕಷ್ಟ ಇದೆ, ನಾನು ಯಾರ ಹತ್ತಿರ ಹೋಗಬೇಕು? ನನಗೆ ಇರತಕ್ಕಂಥ ನೋವು, ನನಗೆ ಆಗಿರತಕ್ಕಂಥ ಅನ್ಯಾಯ, ನನಗೆ ಆಗಿರತಕ್ಕಂಥ ತೊಂದರೆಯನ್ನು ನಾನು ನಿವೇದಿಸಿಕೊಳ್ಳಬೇಕಾದರೆ ನಾನು ಯಾರ ಹತ್ತಿರ ಹೋಗಬೇಕು. ಅಂಥ ಸಂದರ್ಭದಲ್ಲಿ ಅಲ್ಲಿ ಹೋದಂಥ ರೈತರಿಗೆ ಅವರು ಕಾಲು ತೋರಿಸುತ್ತಾರೆ. ಬೂಟ್ ಕಾಲಿನಲ್ಲಿ ಒದೆಯುತ್ತಾರೆಂದರೆ ಇದು ಸಾಮಾನ್ಯ ವಿಚಾರವೇ ಸ್ವಾಮಿ, ದಯವಿಟ್ಟು ತಾವು ಇದನ್ನು ಅರ್ಥಮಾಡಿಕೊಳ್ಳಬೇಕು. ಆದುದರಿಂದ ಅಲ್ಲಿ ನಡೆದಿರತಕ್ಕಂಥ ಘಟನೆ ಏನಿದೆ ಎಷ್ಟು ತೀವ್ರವಾದಂಥ ಎಷ್ಟು ಅಮಾನುಷವಾದಂಥ ಘಟನೆ ನಡೆದಿದೆ. ಆ ಘಟನೆಗೆ ಸರಿದೂಗಬೇಕಾದರೆ ನ್ಯಾಯಾಂಗ ತನಿಖೆಯೇ ಸೂಕ್ತವಾಗಿರತಕ್ಕಂಥಾದ್ದು ಈ ನ್ಯಾಯಾಂಗ ತನಿಖೆ ನಿಧಾನವಾಗಬಹುದು. ನಾನು ನಿಧಾನವಾಗುವುದಿಲ್ಲವೆಂದು ಹೇಳುವುದಿಲ್ಲ. ಆದರೆ ನಿಧಾನವಾದರೂ ಕೂಡ ಸತ್ಯ ಹೊರಗಡೆ ಬರುತ್ತದೆ. ಸತ್ಯವನ್ನು ಬಚ್ಚಿಡುವುದಕ್ಕೆ ಆಗುವುದಿಲ್ಲ. ಆದುದರಿಂದ ಇವತ್ತಿನ ದಿವಸ ಸರ್ಕಾರವನ್ನು ಮತ್ತೊಂದು ಸಾರಿ ವಿನಂತಿಸುತ್ತೇನೆ. ನ್ಯಾಯಾಂಗ ತನಿಖೆಗೆ ಅವರು ಒಪ್ಪಬೇಕು. ಒಪ್ಪದೇ ಇದ್ದರೆ ನಾನು ತೀವ್ರವಾದಂಥ ಪ್ರತಿಭಟನೆಯನ್ನು ಸೂಚಿಸಬೇಕಾಗಿರತಕ್ಕಂಥಾದ್ದು ನನ್ನ ಕರ್ತವ್ಯ. ಅದನ್ನು ಸೂಚಿಸಿ ಹೊರಗಡೆ ಹೋಗಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಸಭಾಧ್ಯಕ್ಷರೇ ಅವರು ಏನು ಹೇಳುತ್ತಾರೆಂದು ಗೊತ್ತಿದ್ದೂ ನಾನು ಮುಂಚೆನೇ ವಾಕ್ ಔಟ್ ಮಾಡಿದ್ದಾಯಿತು. ಆದಾದ ಮೇಲೂ ಸಹ ಅದು ಸರಿ ಆಗುತ್ತಾ ಇಲ್ಲ, ಸರ್ಕಾರದ ಉತ್ತರ ನಮಗೆ ಗೊತ್ತಿತ್ತಲ್ಲ. ನಮ್ಮ ದೇವರ ಸತ್ಯ ನಮಗೆ ಗೊತ್ತಿಲ್ಲವೆ?

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೇ ನೀವು ಮಾಡಬೇಕಾದಂಥ ಕ್ರಮವನ್ನು ಜರುಗಿಸಿದಿರಿ. ಆದುದರಿಂದ ಮುಂದಿನ ಚರ್ಚೆಗೆ ಹೋಗೋಣ. ಈಗ ಅವಿಶ್ವಾಸ ಗೊತ್ತುವಳಿ ಶ್ರೀ ಕಾಗೋಡು ತಿಮ್ಮಪ್ಪ.

ಶ್ರೀ ವಾಟಾಳ್ ನಾಗರಾಜ್ : ನ್ಯಾಯಾಂಗ ತನಿಖೆ ಬಗ್ಗೆ ಸರ್ಕಾರದವರು ಏನೂ ಹೇಳಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸಭಾಧ್ಯಕ್ಷರೇ ಅವಿಶ್ವಾಸ ನಿರ್ಣಯದ ಬಗ್ಗೆ ತಾವು ಶ್ರೀ ಕಾಗೋಡು ತಿಮ್ಮಪ್ಪನವರ ಹೆಸರನ್ನು ಕರೆದಿರಿ. ಅವಿಶ್ವಾಸ ನಿರ್ಣಯದ ಬಗ್ಗೆ ತಮಗೆ ಮನವರಿಕೆ ಮಾಡಲು ಪ್ರಯತ್ನ ಮಾಡುವಂಥಾದ್ದು ಏನೆಂದರೆ, ...

ಅಧ್ಯಕ್ಷರು : ಈಗ ಕಾರ್ಯಕಲಾಪಗಳ ಸಮಿತಿ ಮೀಟಿಂಗ್ ಇದೆ.

(ಸನ್ಮಾನ್ಯ ಉಪಾಧ್ಯಕ್ಷಿಣಿಯವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಇದುವರೆಗೆ ಈ ರೀತಿಯ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಾಗ ಯಾರು ಇದನ್ನು ಮಂಡನೆ ಮಾಡುತ್ತಾರೆ ಅವರು ಮತ್ತು ವಿರೋಧ ಪಕ್ಷದವರು ಎಲ್ಲಾ ಸದಸ್ಯರು ಮಾತನಾಡಿದ ಮೇಲೆ ಸಭಾನಾಯಕರು ಉತ್ತರ ಕೊಡುವಂಥಾದ್ದು ನಡೆದುಕೊಂಡು ಬಂದಿರತಕ್ಕಂಥ ಪದ್ಧತಿ ತಾವು ದಯವಿಟ್ಟು ನೋಡಿ ಕಳೆದ 7-8 ವರ್ಷಗಳಿಂದ ಈಚೆಗೆ ಈ ರೀತಿಯ ಒಂದು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡುವಂಥ ಪರಿಸ್ಥಿತಿ ನಮಗೆ ಒದಗಿ ಬಂದಿಲ್ಲ. ಈಗ ಇದರಿಂದ ನಮಗೇನು ಸಂತೋಷವಿಲ್ಲ. ತಾವು ಹಿಂದೆ ನಡೆದಂಥ ನಡವಳಿಕೆಯನ್ನೂ ಪರಿಶೀಲನೆ ಮಾಡಿ ನೋಡಿ. ಅಕಸ್ಮಾತ್ ಬೇರೆಯವರು ಉತ್ತರ ಕೊಡುವುದಾದರೆ ನಾವೆಲ್ಲಾ ಏನು ಕೇಳುತ್ತೇವೆ ಅದನ್ನು ತಿಳಿದುಕೊಂಡು ಅವರು ಉತ್ತರ ಕೊಡಬೇಕಾಗುತ್ತದೆ. ಇದು ನಡೆದುಕೊಂಡು ಬಂದ ಪದ್ಧತಿ. ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಈ ಹೊಸ ಪದ್ಧತಿ ಯಾವತ್ತಿನಿಂದ ಜಾರಿಯಾಯಿತು. ಇದರ ಉದ್ದೇಶವೇನು? ನನಗನಿಸುತ್ತದೆ, ನಾವು ಎಲ್ಲಾ ಮಾತನಾಡಿದ ನಂತರ ಉತ್ತರ ಕೊಡಬೇಕಾದ್ದು ಅವರ ಕರ್ತವ್ಯ. ಈ ಕಡೆಯವರು ಮಾತನಾಡಿ, ಆ ಕಡೆಯವರೂ ಮಾತನಾಡಿ ಎಂದರೆ ಆಗ ಮುಖ್ಯಮಂತ್ರಿಗಳ ಉತ್ತರ ಬೇಕಾಗಿಲ್ಲ. ಈ ಸಭೆಯಲ್ಲಿ ಇದರ ಬಗ್ಗೆ ಇನ್ನೂ ಐದು ದಿವಸ ಚರ್ಚೆ ನಡೆಯಬೇಕಾಗುತ್ತದೆ. ಐದು ದಿವಸ ಚರ್ಚೆ ನಡೆಯುವುದಕ್ಕೆ ತಾವು ಅವಕಾಶ ಕೊಡುತ್ತೀರೋ, ನಾನು ಅವಿಶ್ವಾಸ ನಿರ್ಣಯದ ಪರವಾಗಿ ಮಾತನಾಡುತ್ತಾ ಇಲ್ಲ. ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ ತಾವು ಇಟ್ಟಿರತಕ್ಕಂಥದ್ದು No-confidence Motion . Please don't forget this. ಇದು ನಿರ್ಣಯ ಇದೆ. ನಿರ್ಣಯ ಬಂದ ಮೇಲೆ ವಿರೋಧ ಪಕ್ಷದವರೆಲ್ಲರೂ ಮಾತನಾಡಿದ ಮೇಲೆ ನಾವು ಮಾತನಾಡಲೇಬೇಕೆಂಬ ಪ್ರಶ್ನೆ ಬರುವುದಿಲ್ಲ. ಹಿಂದೆಯೂ ಕೂಡ ಘಟನೆಗಳಿವೆ. ...

ಶ್ರೀ ವಾಟಾಳ್ ನಾಗರಾಜ್ : ಅದು ಸರಿ. ಆದರೆ ....

(ಗೊಂದಲ)

ಉಪಾಧ್ಯಕ್ಷರು : ಅವರು ಮಾತನಾಡಿದ ಮೇಲೆ ತಾವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ : ವಾಟಾಳ್ ನಾಗರಾಜ್‌ರವರೇ ದಯವಿಟ್ಟು ತಮ್ಮ ಸ್ಥಾನವನ್ನು ಅಲಂಕಾರ ಮಾಡಿ. ಮಾನ್ಯ ಉಪಾಧ್ಯಕ್ಷಿಣಿಯವರೇ, ಒಬ್ಬರು ಮಾತನಾಡಿದ ಮೇಲೆ ಆಕ್ಷುಯಲಿ ಮತ್ತೊಬ್ಬರು ಈ ಕಡೆ ಮಾತನಾಡುತ್ತಾರೆ. ನಂತರ ತಾವು ಮಾತನಾಡುತ್ತೀರಿ. ತಮ್ಮ ಪಕ್ಷದ ಮುಖಂಡರು ಮತ್ತೆ ಮಾತನಾಡುತ್ತಾರೆ. This is how it goes. This is a motion . Do not forget this. ಇದು ನಿರ್ಣಯ ನಿಮ್ಮ ಮುಂದಿರತಕ್ಕಂಥ ವಿಚಾರ. ಆದುದರಿಂದ ಎಲ್ಲರೂ ಮಾತನಾಡಿದ ಮೇಲೆಯೇ ಮಾತನಾಡಬೇಕು ಎನ್ನತಕ್ಕಂಥ ಕಾನೂನು ಆ ರೀತಿಯ ಪದ್ಧತಿ ಎಲ್ಲೂ ಇಲ್ಲ. ಮಾನ್ಯ ಅಧ್ಯಕ್ಷರು ಕಾಗೋಡು ತಿಮ್ಮಪ್ಪನವರನ್ನು ಕರೆದಿದ್ದರಿಂದ ಅವರು ಮಾತನಾಡುತ್ತಾರೆ. ಅವರು ಮಾತನಾಡಿದರ ನಂತರ ತಾವು ಕೂಡ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಈಗ ಕಾಗೋಡು ತಿಮ್ಮಪ್ಪನವರು ಮಾತನಾಡಲಿ, ಯಾರು ಬೇಕಾದರೂ ಮಾತನಾಡಲಿ, ಎಷ್ಟು ದಿವಸ ಎನ್ನುವ ಕಾಲ ನಿಗದಿ ಮಾಡಬೇಕಲ್ಲವೆ?

ಉಪಾಧ್ಯಕ್ಷರು : ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿದೆ ಅಲ್ಲಿ ತೀರ್ಮಾನವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ತಮಗೆ ಹೇಳಬೇಕಾದರೆ, ಇದು ಒಂದೇ ದಿವಸದಲ್ಲಿ ಮುಗಿಯಬೇಕಾಗಿತ್ತು. ನಾನು ಪಾರ್ಲಿಮೆಂಟ್ ಪದ್ಧತಿಯನ್ನು ಕೂಡ ಕ್ವೋಟ್ ಮಾಡಿ ಹೇಳಿದೆ. ಖಾಸಗಿಯಾಗಿ ಅಧ್ಯಕ್ಷರ ಕೊಠಡಿಯಲ್ಲಿ ಮಾತನಾಡಬೇಕಾದರೂ ಕೂಡ ಹೇಳಿದೆ. ಎರಡನೆಯ ದಿವಸವಾದರೂ ಕೂಡ ಮುಗಿಯಬೇಕು. ಹಿಂದೆ ಅವರ ಕಾಲದಲ್ಲಿಯೂ ಕೂಡ ಅಷ್ಟೆ ನಡೆದಿದೆ. ಕಾನ್‌ಫಿಡೆನ್ಸ್ ಮೋಷನ್ ಇರಲಿ, ನೋ ಕಾನ್‌ಫಿಡೆನ್ಸ್ ಮೋಷನ್ ಇರಲಿ, ಅದು ಮುಗಿಯಬೇಕು. ದಿನಗಟ್ಟಲೆ ಭಾಷಣ ಮಾಡಕೊಂಡು ಕುಳಿತುಕೊಳ್ಳಲಿಕ್ಕೆ ಬರುವುದಿಲ್ಲ. ಕಾನ್‌ಫಿಡೆನ್ಸ್ ಮೋಷನ್ ಒಂದೇ ದಿವಸದಲ್ಲಿ ಮುಗಿಯಬೇಕು ಎನ್ನುವ ಬಗ್ಗೆ ಪಾರ್ಲಿಮೆಂಟಿನಲ್ಲಿ ರೂಲಿಂಗ್ಸ್ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಕಾಗೋಡು ತಿಮ್ಮಪ್ಪನವರು ಮಾತನಾಡಲಿ, ಅದಕ್ಕೆ ನಮ್ಮ ವಿರೋಧ ಇಲ್ಲ. ನಾನು ತಮ್ಮನ್ನು ಕನ್‌ವಿನ್ಸ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಹಿಂದಿನ ಕಾರ್ಯಕಲಾಪಗಳನ್ನು ತೆಗೆದು ನೋಡಿದಾಗ, ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಂಥ ಸಂದರ್ಭದಲ್ಲಿ ವಿರೋಧ ಪಕ್ಷದ ಕಡೆಯಿಂದ ಯಾರು ಮಂಡನೆ ಮಾಡಿದ್ದಾರೆ ಅವರು ಪೂರ್ಣವಾಗಿ ಮಾತನಾಡಿದ ಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಪರಿಪಾಠ ಇತ್ತು. ಆ ಒಂದು ಪದ್ಧತಿ ಈ ಮನೆಯಲ್ಲಿ ಅನೇಕ ವರ್ಷಗಳಿಂದ ಏನು ನಡೆದುಕೊಂಡು ಬಂದಿದೆ ಆ ಒಂದು ಮೇಲ್ಪಂಕ್ತಿಯನ್ನು ಎತ್ತಿ ಹಿಡಿಯಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಆ ರೀತಿ ಹಿಂದೆ ನಡೆದಿಲ್ಲ, ಈಗ ಅವರಿಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ತಾವು ಅಪ್ಪಣೆ ಕೊಟ್ಟರೆ ನನ್ನ ಅಭ್ಯಂತರ ಇಲ್ಲ. ಹಿಂದೆ ಏನು ನಡೆದಿದೆ ಎಂದು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಉಪಾಧ್ಯಕ್ಷರು : ಪಾರ್ಲಿಮೆಂಟಿನಲ್ಲಿ ಈ ತರಹ ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದಾಗ ಆಳುವ ಪಕ್ಷದ ಸದಸ್ಯರಿಗೂ ಸಹ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಾರೆ. ಆದ್ದರಿಂದ, ಈಗ ಅಧ್ಯಕ್ಷರು ಕಾಗೋಡು ತಿಮ್ಮಪ್ಪನವರನ್ನು ಮಾತನಾಡಲಿಕ್ಕೆ ಕರೆದಿದ್ದಾರೆ. ಈಗ ಕಾಗೋಡು ತಿಮ್ಮಪ್ಪನವರು ಮಾತನಾಡಲಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡಲಿ. ಆದರೆ ಒಂದು ಸಮಯವನ್ನು ನಿಗದಿ ಮಾಡಬೇಕು.

ಈ ಕಡೆಯಿಂದ ಬಹಳ ಜನ ಮಾತನಾಡುವವರಿದ್ದೇವೆ. ಆ ಕಡೆಯೂ ಮಾತನಾಡುವವರಿದ್ದಾರೆ.

ಉಪಾಧ್ಯಕ್ಷರು : ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ನಡೆಯುತ್ತದೆ. ಅದರಲ್ಲಿ ಎಷ್ಟು ಸಮಯ ಯಾರ್‍ಯಾರು ಎನ್ನುವುದು ತೀರ್ಮಾನವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ...

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಯಡಿಯೂರಪ್ಪನವರು ಒಂದು ಪರ್ಟಿನೆಂಟ್ ಪಾಯಿಂಟ್ ರೈಸ್ ಮಾಡಿದ್ದಾರೆ. ನಾವು ವಿರೋಧ ಪಕ್ಷದವರು ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದ್ದೇವೆ. ನಮಗೆ ಈ ಸರ್ಕಾರದ ಬಗ್ಗೆ, ಮಂತ್ರಿಮಂಡಲದ ಬಗ್ಗೆ ವಿಶ್ವಾಸ ಇಲ್ಲ ಎಂದು ಹೇಳಿದ್ದೇವೆ. ಏತಕ್ಕೆ ವಿಶ್ವಾಸ ಇಲ್ಲ ಎಂದು ನಾವು ಆರ್‌ಗ್ಯೂ ಮಾಡಬೇಕಾಗುತ್ತದೆ. ಅದು ಆದಮೇಲೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟು ನಂತರ ಓಟಿಗೆ ಹಾಕಬೇಕಾಗುತ್ತದೆ. ಇದು ನಡೆದುಕೊಂಡು ಬಂದಿರತಕ್ಕ ಒಂದು ಪ್ರೊಸಿಜರ್. ಆದರೆ ಈ ಪ್ರೊಸೀಜರ್‌ನ್ನು ನೀವು ಬ್ರೇಕ್ ಮಾಡಿ, ಈಗ ರೂಲಿಂಗ್ ಪಾರ್ಟಿಯವರು ಮಾತನಾಡುತ್ತಾರೆ ಎಂದರೆ ಅವರು ಏನು ಮಾತನಾಡುತ್ತಾರೆ.

ಉಪಾಧ್ಯಕ್ಷಿಣಿಯವರು : ಈಗ ಕಾಗೋಡು ತಿಮ್ಮಪ್ಪನವರು ಉತ್ತರ ಕೊಡುವುದಿಲ್ಲ. ಅವರ ಅನಿಸಿಕೆಗಳನ್ನು ಅವರು ಹೇಳಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದಕ್ಕೆ ತಕರಾರು ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ಇದು ಬೇಡಿಕೆಗಳ ಮೇಲೆ ಚರ್ಚೆ ನಡೆದಂತಾಗುತ್ತದೆ. ಇದಕ್ಕೆ ಮಹತ್ವ ಬರುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನೋ ಕಾನ್‌ಫಿಡೆನ್ಸ್ ಮೂವ್ ಮಾಡಿದಾಗ ಆಡಳಿತ ಪಕ್ಷದವರು ಇದಕ್ಕೆ ಸಪೋರ್ಟ್ ಮಾಡಿ ಮಾತನಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಾವು ಇಲ್ಲಿ ವಿಶ್ವಾಸ ನಿರ್ಣಯ ಮಂಡಿಸಿಲ್ಲ. ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿರುವುದು. ಇದುವರೆಗೆ ನಡೆದುಕೊಂಡು ಬಂದಿರತಕ್ಕದ್ದು ಏನೆಂದರೆ, ವಿರೋಧಪಕ್ಷದವರು ಅವಿಶ್ವಾಸ ನಿರ್ಣಯದ ಬಗ್ಗೆ ಮಾತನಾಡುವುದು ನಂತರ ಸಭಾನಾಯಕರಾದ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕಂಥಾದ್ದು.

ಶ್ರೀ ಎಸ್. ಬಂಗಾರಪ್ಪ : ಈ ಕಡೆ ಕುಳಿತುಕೊಂಡು ಈ ನಿರ್ಣಯದ ಮೇಲೆ ವಿಶ್ವಾಸ ಇದೆ ಎಂದು ಇಡೀ ಸದನಕ್ಕೆ ಹೇಳತಕ್ಕ ಹಕ್ಕು ಬರುವುದಿಲ್ಲವೆ. ತಾವು ಯಾವ ರೂಲಿಂಗ್ ಇದೆ ಕ್ವೋಟ್ ಮಾಡಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ತಾವು ಯಾವ ರೂಲಿಂಗ್ ಇದೆ ಎಂದು ಕ್ವೋಟ್ ಮಾಡಿ ಹೇಳಿ. ಇದು ಒಂದು ಸಂಪ್ರದಾಯ ಮೊದಲಿನಿಂದಲೂ ನಡೆದುಕೊಂಡು ಬಂದಿರುವಂಥ ಒಂದು ಸಂಪ್ರದಾಯ.

ಶ್ರೀ ಎಸ್. ಬಂಗಾರಪ್ಪ : ಎಲ್ಲಿದೆ ಸಂಪ್ರದಾಯ?

ಶ್ರೀ ವಾಟಾಳ್ ನಾಗರಾಜ್ : ಎರಡೂ ಕಡೆ ಬೇಡಿಕೆ ಮೇಲೆ ಚರ್ಚೆ ಆಗಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ನನ್ನ ಪ್ರಶ್ನೆ ಏನೆಂದರೆ, ಪ್ರಧಾನಿಯವರಿಗೆ ಈ ಸರ್ಕಾರದ ಬಗ್ಗೆ ಆರೋಪದ ಒಂದು ಪಟ್ಟಿಯನ್ನು ಕೊಟ್ಟಿರತಕ್ಕ ಆಡಳಿತ

ಪಕ್ಷದ ಸದಸ್ಯರು ಮಾತನಾಡಿದರೆ ಆಗ ಈ ಅವಿಶ್ವಾಸ ನಿರ್ಣಯಕ್ಕೆ ಬೆಂಬಲ ಕೊಟ್ಟು ಅವರು ಮಾತನಾಡುತ್ತಾರೆ ಎಂದು ನನಗೆ ಅರ್ಥವಾಗುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಈ ಸರ್ಕಾರಕ್ಕೆ ತಮ್ಮ ಬೆಂಬಲವನ್ನು ಕೊಡುತ್ತಿರುವವರು. ಮಾನ್ಯ ಪ್ರಧಾನಮಂತ್ರಿಗಳಿಗೆ ಕೊಟ್ಟಿರತಕ್ಕ ಮನವಿಯಲ್ಲಿ ನಿಮ್ಮ ಸಹಿ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ನೀವು ಇವತ್ತು ಈ ಅವಿಶ್ವಾಸ ನಿರ್ಣಯದ ಪರವಾಗಿ ಮಾತನಾಡುತ್ತೀರೋ ಅಥವಾ ಅದರ ವಿರುದ್ಧವಾಗಿ ಮಾತನಾಡುತ್ತೀರೋ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ತಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ನಾವು ಇನ್ನೂ ಹೆಚ್ಚು ವಿಷಯಗಳನ್ನು ಕೊಡುವುದಕ್ಕೆ ತಯಾರಿದ್ದೇವೆ. ಅವರು ಉತ್ತರ ಕೊಡಲಿ.

ಉಪಾಧ್ಯಕ್ಷಿಣಿಯವರು : ಮಾನ್ಯ ಕಾಗೋಡು ತಿಮ್ಮಪ್ಪನವರು ಕೊಡುತ್ತಿರುವುದು ಉತ್ತರವನ್ನಲ್ಲ.

ಶ್ರೀ ಹೆಚ್. ಏಕಾಂತಯ್ಯ : ಅವರೂ ಕೂಡ ಚರ್ಚೆಯಲ್ಲಿ ಭಾಗವಹಿಸಲಿ. ಇಲ್ಲಿ ಏನು ಪ್ರಶ್ನೆ ಬಂದಿದೆ ಎಂದರೆ, ನಾವು ಏನು ಅವಿಶ್ವಾಸ ನಿರ್ಣಯವನ್ನು ಸೂಚನೆ ಮಾಡಿದ್ದೇವೆ, ಇದನ್ನು ಸೂಚನೆ ಮಾಡಿದಂಥವರು. ಅನೇಕ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಲಿದ್ದೇವೆ. ನಾವು ಪ್ರಸ್ತಾಪವನ್ನು ಮಾಡಿದ ಮೇಲೆ ಆ ಕಡೆ ಎಲ್ಲಾ ಮಾನ್ಯ ಸದಸ್ಯರೂ ಮಾತನಾಡಲಿ. ಅದಕ್ಕೆ ನಮ್ಮ ಅಭ್ಯಂತರ ಇಲ್ಲ. ಅವರು ಸಮರ್ಥನೀಯವಾದಂಥ ಕಾರಣಗಳನ್ನು ಕೊಟ್ಟು ಸರ್ಕಾರದ ಪರವಾಗಿ ಪ್ರತಿಪಾದನೆ ಮಾಡಲಿ, ಬೆಂಬಲ ನೀಡಲಿ. ಅದಕ್ಕೆ ನಮ್ಮ ತಕರಾರು ಇಲ್ಲ. ನಾವು ನಮ್ಮ ಅಭಿಪ್ರಾಯಗಳನ್ನು ಹೇಳುವುದಕ್ಕೆ ಅವಕಾಶ ಇಲ್ಲದೆ ಮಾನ್ಯ ನಾಯಕರು ಒಬ್ಬರು ಮಾತನಾಡಿದ ಕೂಡಲೇ ಅವರು ಮಾತನಾಡುವುದಾದರೆ, ಈ ಅವಿಶ್ವಾಸ ನಿರ್ಣಯದ ಸೂಚನೆಗೆ ಸಹಿ ಹಾಕಿರತಕ್ಕ ನಾವು ಏನಿದ್ದೇವೆ.....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾಗೋಡು ತಿಮ್ಮಪ್ಪನವರೇ, ನಾವು ಕಾರ್ಯ ಕಲಾಪಗಳ ಸಮಿತಿಯ ಸಭೆಗೆ ಹೋಗುತ್ತಿದ್ದೇವೆ. ನೀವು ಏನು ಬೇಕಾದರೂ ಮಾತನಾಡಿಕೊಳ್ಳಿ

ಶ್ರೀ ಹೆಚ್. ಏಕಾಂತಯ್ಯ : ಈ ಸರ್ಕಾರದಲ್ಲಿ ಏತಕ್ಕೋಸ್ಕರ ವಿಶ್ವಾಸ ಇಲ್ಲ ಎನ್ನುವುದರ ಬಗ್ಗೆ ಮಾತನಾಡುವುದಕ್ಕೆ ಮೊದಲು ನಮಗೆ ಅವಕಾಶ ಮಾಡಿಕೊಟ್ಟು, ನಂತರ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ನಾವು ಖಂಡಿತವಾಗಿ ಕಿವಿ, ಕಣ್ಣು, ಮೂಗನ್ನು ತೆರೆದುಕೊಂಡು ಕೇಳುತ್ತಾ ಕುಳಿತುಕೊಳ್ಳುತ್ತೇವೆ. ನಾವು ಇದರ ಬಗ್ಗೆ ಇನ್ನೂ ಏನನ್ನೂ ಕೂಡ ಹೇಳಿಯೇ ಇಲ್ಲ. ನೀವು ಆ ನಿಮ್ಮ ಸರ್ಕಾರವನ್ನು ಸಮರ್ಥನೆ ಮಾಡಿ ಮಾತನಾಡುವುದಾದರೆ ಹೇಗೆ ?

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಆರ್.ಎನ್. ನಾಯಕ್‌ರವರು ನಮಗೆಲ್ಲಾ ಆರ್ಡರ್ ಮಾಡಿದ್ದಾರೆ. ನಾನು ಅದನ್ನು ಪಾಲನೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಉಪಾಧ್ಯಕ್ಷಿಣಿಯವರೇ, ಇವತ್ತು ಉತ್ತರವನ್ನು ಕೊಟ್ಟು ಮುಗಿಸತಕ್ಕ ಒಂದು ತೀರ್ಮಾನಕ್ಕೆ ವಿರೋಧ ಪಕ್ಷದವರು ಒಪ್ಪಿ ಬದ್ಧರಾಗಿದ್ದಾರೆ. ಇವತ್ತು ನಾನು ಉತ್ತರವನ್ನು ಕೊಡುವುದಾದರೆ ಎಷ್ಟು ಹೊತ್ತಿಗೆ ಪ್ರಾರಂಭ

ಮಾಡಬೇಕೆಂಬ ವಿಚಾರ ಇದರಲ್ಲಿ ಅಡಗಿದೆ. ನೀವು ಭಾಷಣ ಮಾಡುವುದು ಬೇಡ ಎಂದು ನಾನು ಅಡ್ಡಿ ಬರುತ್ತಿಲ್ಲ. ತಾವು ಮಾತನಾಡಬೇಕಾಗುತ್ತದೆ, ಮಾತನಾಡಿ. ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ದೊಡ್ಡ ಪಟ್ಟಿ ಇದೆ, 10-18 ಜನ ಮಾತನಾಡುತ್ತಾ ಹೋದರೆ ಕಷ್ಟವಾಗುತ್ತದೆ. ಹಿಂದೆ ನಾವು ಕೂಡ ಮಾಡಿದಾಗ ಎಲ್ಲರೂ ಭಾಷಣ ಮಾಡುವುದಕ್ಕೆ ಹೋಗಲಿಲ್ಲ. ಇದನ್ನು ತಮಗೆ ನಾನು ನೆನಪು ಮಾಡಿಕೊಡುವ ಶಕ್ತಿ ಇದೆ. ತಮ್ಮ ಸಲಹೆ ನನಗೆ ಅವಶ್ಯಕ. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವುದಾದರೂ ಇಷ್ಟೆ. ತಾವು ಮಾತನಾಡಿ. ನಮ್ಮ ಕಡೆ ಹೆಚ್ಚು ಜನರು ಮಾತನಾಡುವುದಿಲ್ಲ. ಆದರೆ ತಾವು ಅಷ್ಟೊಂದು ದೊಡ್ಡ ಪಟ್ಟಿಯನ್ನು ಕೊಟ್ಟು ಅವರೆಲ್ಲಾ ಮಾತನಾಡಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ ಕಾಲವನ್ನು ನಿಗದಿ ಮಾಡಿ, ಈ ಚರ್ಚೆಯನ್ನು ಆದಷ್ಟೂ ಲಂಚ್ ಅವರ್‌ನೊಳಗೆ ಮುಗಿಸಿದರೆ, ಲಂಚ್ ಅವರ್ ಮುಗಿದ ಕೂಡಲೇ ನಾನು ಉತ್ತರವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಇದು ನಮ್ಮ ಅಂಡರ್ ಸ್ಟ್ಯಾಂಡಿಂಗ್.

ಶ್ರೀ ಆರ್.ವಿ. ದೇಶಪಾಂಡೆ : ಇವತ್ತು 9 ಘಂಟೆಗೆ ಅಧಿವೇಶನ ಪ್ರಾರಂಭವಾಗಿದೆ, 3 ಗಂಟೆಗೆ ಮುಗಿಯುತ್ತದೆ. ಆದ್ದರಿಂದ ಈಗ ಲಂಚ್ ಅವರ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ : ಲಂಚ್ ಅವರ್ ಇಲ್ಲ ಎನ್ನುವುದಾದರೆ ಕನಿಷ್ಠ ಒಂದೂವರೆ ಗಂಟೆಗಾದರೂ ಉತ್ತರವನ್ನು ಕೊಡುವುದಕ್ಕೆ ಪ್ರಾರಂಭ ಮಾಡಬೇಕಾಗುತ್ತದೆ. ಈಗ ಬಿಸಿನೆಸ್ ಅಡ್ವೈಸರಿ ಕಮಿಟಿ ಸಭೆ ಸೇರುತ್ತದೆ....

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ : ಈ ಕಡೆಯಿಂದ ತಮಗೆ ಹಲವಾರು ಜನರ ಪಟ್ಟಿಯನ್ನು ಕೊಟ್ಟಿದ್ದೇವೆ..

ಶ್ರೀ ಎಸ್. ಬಂಗಾರಪ್ಪ : ಇವತ್ತು ಬಿ.ಎ.ಸಿ.ಯಲ್ಲಿ ತೀರ್ಮಾನವಾಗುತ್ತದೆ. ಅದರ ಪ್ರಕಾರ ನಾವು ನಡೆದುಕೊಳ್ಳೋಣ. ಆದರೆ ಮೊದಲು ತೀರ್ಮಾನವಾಗಿರುವುದಕ್ಕೇ ನೀವು ಬದ್ಧರಾಗದಿದ್ದರೆ ಬಹಳ ಕಷ್ಟವಾಗುತ್ತದೆ. ಇದನ್ನು ತಮಗೆ ನೆನಪು ಮಾಡಿಕೊಟ್ಟಿದ್ದೇನೆ.

ಶ್ರೀ ಹೆಚ್. ಏಕಾಂತಯ್ಯ : ಬೆಳಿಗ್ಗೆಯಿಂದ 3 ಗಂಟೆ ಕಾಲ ಪ್ರಶ್ನೋತ್ತರ ಮತ್ತಿತರ ವಿಚಾರಗಳಿಗೆ ಕಾಲ ಕಳೆದು ಹೋಗಿದೆ.

ಶ್ರೀ ಎಸ್. ಬಂಗಾರಪ್ಪ : ಆದುದರಿಂದಲೇ ನಾನು ಹೇಳಿದ್ದು, 1-30 ಗಂಟೆಗೆ ನಾನು ರಿಪ್ಲೈ ಪ್ರಾರಂಭ ಮಾಡುತ್ತೇನೆ ಎಂದು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಕಾಗೋಡು ತಿಮ್ಮಪ್ಪನವರು ಈಗ ಮಾತನಾಡಬಾರದೆಂದು ನಾವು ಹೇಳುತ್ತಿಲ್ಲ, ಅವರು ಮಾತನಾಡಲಿ. ನಮ್ಮದು ನೋ ಕಾನ್‌ಫಿಡೆನ್ಸ್ ಮೋಷನ್ ಇದೆ.

ಶ್ರೀ ಎಸ್. ಬಂಗಾರಪ್ಪ : ಪುಣ್ಯಕ್ಕೆ ಅವರು ಬೇಡವೆಂದು ಹೇಳಲಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಾವು ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದಾಗ ನಾವು ಹೇಳುವುದನ್ನು ಅವರು ಕೇಳಲಿ. ನಾವು ಮಾತನಾಡುವುದು ಅವರಿಗೆ ಸಹಾಯವಾಗಲಿ. ನಾವು ಮಾತನಾಡುವುದಕ್ಕಿಂತ ಮುಂಚಿತವಾಗಿ ಅವರು ಮಾತನಾಡಿದರೆ ಹೇಗೆ? ಈ ಸದನದಲ್ಲಿ ನೋ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಮಾಡದ ಹೊರತು ಯಾವ ಮಂತ್ರಿಗಳಾಗಲಿ, ಸದಸ್ಯರಾಗಲಿ ಮಾತನಾಡಿದ್ದು ನಮ್ಮ ಗಮನಕ್ಕೆ ಬಂದಿಲ್ಲ. ಆದ್ದರಿಂದ ಇದರ ಬಗ್ಗೆ ರೂಲಿಂಗ್ ಕೊಟ್ಟರೆ ಬಹಳ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ : ಪಾರ್ಲಿಮೆಂಟಿನಲ್ಲಿ ಮಾತನಾಡಿದ್ದಾರೆ. ಹಿಂದೆ ಮಾತನಾಡಿದ್ದಾರೆ ಇಲ್ಲಿ ದಾಖಲೆಯಲ್ಲಿದೆ. ಅದರ ಬಗ್ಗೆ ಅನುಮಾನ ಯಾವಾಗಲೂ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಮಗೆ ತಿಳಿದಿರುವಂತೆ ನಮ್ಮ ಹೌಸ್‌ನಲ್ಲಿ ಕಳೆದ 8-10 ವರ್ಷಗಳಲ್ಲಿ ನೋ ಕಾನ್‌ಫಿಡೆನ್ಸ್ ಮೋಷನ್‌ನ್ನು ಮೂವ್ ಮಾಡಿರತಕ್ಕ ಸಂದರ್ಭದಲ್ಲಿ ರೂಲಿಂಗ್ ಪಾರ್ಟಿಯ ಸದಸ್ಯರು ಮಾತನಾಡಿರತಕ್ಕದ್ದು ನಮಗೆ ಗೊತ್ತಿಲ್ಲ. ತಾವು ಲೋಕಸಭೆಯ ನಿದರ್ಶನವನ್ನು ಕೊಡಬಹುದು. ಅದು ನನಗೆ ಗೊತ್ತಿಲ್ಲ. ಮಾನ್ಯ ಸಭಾಧ್ಯಕ್ಷರೂ ಅದನ್ನೇ ಹೇಳಿದ್ದಾರೆ. ಲೊಕಸಭೆಯಲ್ಲಿ ಅದು ಆಗಿರಬಹುದು.

ಶ್ರೀ ಎಸ್. ಬಂಗಾರಪ್ಪ : ಅದಕ್ಕಿಂತ ಮೊದಲು ನೋ ಕಾನ್‌ಫಿಡೆನ್ಸ್ ಮೋಷನ್ ಇಲ್ಲಿ ಬಂದಾಗ ತಾವು ಇಲ್ಲಿ ಸದಸ್ಯರಾಗಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನಿಮಗೆ ಸಹಾಯ ಮಾಡಲಿಕ್ಕೆ ನಾವು ಈ ಸೂಚನೆ ಮಾಡುತ್ತಿದ್ದೇವೆ. ಹೇಳತಕ್ಕ ಎಲ್ಲಾ ವಾದಕ್ಕೂ ಪ್ರತಿಯಾಗಿ ವಾದ ಮಾಡತಕ್ಕ ಶಕ್ತಿ ಸಾಮಾರ್ಥ್ಯ ನಿಮಗಿದೆ. ನಾವು ಏನು ವಿಚಾರ ಹೇಳುತ್ತೇವೆ ಅದಕ್ಕೆ ಉತ್ತರ ಕೊಡತಕ್ಕಂಥ ಶಕ್ತಿ ನಿಮಗಿದೆ ಎಂದು ನಾವೆಲ್ಲ ತಿಳಿದುಕೊಂಡಿದ್ದೇವೆ. ನಿಮ್ಮನ್ನು ಡಿಫೆಂಡ್ ಮಾಡುವುದಕ್ಕೆ ಅವರೇಕೆ ಬರಬೇಕು. ಕಾಲಾವಕಾಶವಿಲ್ಲವೆಂದು ಈಗ ನೀವೇ ಹೇಳುತ್ತಿದ್ದೀರಿ. ಒಂದುವರೆ ಗಂಟೆಗೆ ಮುಗಿಸಬೇಕೆಂದು ಹೇಳುತ್ತಿದ್ದೀರಿ ಹಾಗಾದರೆ ಏತಕ್ಕೆ ಮಾತನಾಡಬೇಕು? ಅವರು ಏತಕ್ಕೆ ಡಿಫೆಂಡ್ ಮಾಡಬೇಕು. ಪರ್ಟಿಕ್ಯುಲರಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರೇ ಏತಕ್ಕೆ ಮಾತನಾಡಬೇಕು?

ಶ್ರೀ ಕಾಗೋಡುತಿಮ್ಮಪ್ಪ: ಕಾಗೋಡುತಿಮ್ಮಪ್ಪ ಒಬ್ಬ ಸದಸ್ಯ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾಗೋಡು ತಿಮ್ಮಪ್ಪನವರು ಮುನಿಸಿಕೊಳ್ಳಬಾರದು. ಅವರು ಮಾತನಾಡಬಹುದು ತಪ್ಪಿಲ್ಲ.

ಉಪಾಧ್ಯಕ್ಷಣೆಯವರು : ಈಗ ಮಾನ್ಯ ತಿಮ್ಮಪ್ಪನವರೇ ತಾವು ಪ್ರಾರಂಭಮಾಡಿ. ಆದಷ್ಟು ಸಂಕ್ಷಿಪ್ತವಾಗಿ ಮಾತನಾಡಿ.

ಅವಿಶ್ವಾಸ ನಿರ್ಣಯ ಮೇಲಿನ ಚರ್ಚೆ

+ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷಣೆಯವರೇ ನಮ್ಮ ವಿರೋಧಪಕ್ಷದ ನಾಯಕರು ಅವಿಶ್ವಾಸ ನಿರ್ಣಯವನ್ನು ಮಂಡಿಸಿ ಅವಿಶ್ರಾಂತವಾಗಿ ಸುಮಾರು ನಾಲ್ಕೂವರೆ ಗಂಟೆಗಳ ಸುದೀರ್ಘವಾದಂಥ ಚರ್ಚೆ ಮಾಡಿ ಸದನದ ಮುಂದೆ ತಮ್ಮ ವಾದವನ್ನು ಸಮರ್ಥನೆ ಮಾಡಿದ್ದಾರೆ ಮಾನ್ಯ ವಿರೋಧಪಕ್ಷದ ಸದಸ್ಯರುಗಳಿಗೆ ಅನುಮಾನ ಏನು ಬರುತ್ತಿದೆಯೆಂದರೆ ಒಂದು ನಿರ್ಣಯವನ್ನು ಸದನದಲ್ಲಿ ಮಂಡಿಸಿದಮೇಲೆ ಅದು ಈ ಸದನದ ವಸ್ತುವಾಗುತ್ತದೆ. ಅದು ವಸ್ತುವಾದಮೇಲೆ ಆ ವಸ್ತುವಿನಮೇಲೆ ಚರ್ಚೆ ಮಾಡುವುದಕ್ಕೆ ಪ್ರತಿಯೊಬ್ಬ ಶಾಸಕರಿಗೂ ಇಲ್ಲಿ ಅವಕಾಶವಿರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಆ ಅವಿಶ್ವಾಸ ನಿರ್ಣಯ ಬಗ್ಗೆ ಸರ್ಕಾರದ ಪರವಾಗಿ ನಿಂತು ಕಾಗೋಡು ತಿಮ್ಮಪ್ಪನವರು ಸಮರ್ಥನೆ ಮಾಡುತ್ತಾರೆ. ಎಂದು ನಾವೆಂದೂ ಅಂದಿರಲಿಲ್ಲ ಏನೋ ಕಾಲ ಬದಲಾವಣೆಯಾಗಿದೆ ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲ.